ಸಾಲಿಗ್ರಾಮ

ಸಾಲಿಗ್ರಾಮ ಉತ್ಪತ್ತಿ, ಸಿಗುವ ಸ್ಥಳ, ಪ್ರಕಾರಗಳು, ಆಕಾರಗಳು, ಲಕ್ಷಣಗಳು, ಫಲಗಳು,
ಸಂಕ್ಷಿಪ್ತ ಪೂಜಾ ಪದ್ಧತಿ, ದೇವ ಮಂದಿರದಲ್ಲಿ ಅನುಸರಿಸಬೇಕಾದ ನಿಯಮಗಳು ಇತ್ಯಾದಿಗಳಿಂದ
ಕೂಡಿದ ಸಕಲರಿಗೂ ಉಪಯುಕ್ತವಾದ ಧಾರ್ಮಿಕ ಪುಸ್ತಕ

ಬರೆದವರು

ಶ್ರೀ ಕೃಷ್ಣಾಚಾರ್ಯ ರಂಗಾಚಾರ್ಯ ನವರತ್ನ, ಧಾರವಾಡ.

ಪ್ರಕಾಶಕರು

ಶ್ರೀ ವೈಭವಲಕ್ಷ್ಮೀ ಪ್ರಕಾಶನ

ಎರಡನೇ ಹಂತ, ಲಕ್ಷ್ಮೀ ಬಾಲಕೃಷ್ಣ ಸ್ಕ್ವೇರ್, ಸ್ಟೇಶನ್ ರಸ್ತೆ, ಹುಬ್ಬಳ್ಳಿ. ☎ : 2362581

ಪ್ರತಿಯೊಬ್ಬರ ಮನೆಯಲ್ಲಿ ಅತ್ಯವಶ್ಯವಾಗಿ ಇರಬೇಕಾದ ಅತ್ಯುತ್ತಮ ಮಾಹಿತಿ ಪುಸ್ತಕ
ಹಾಗೂ ಓದಿ ತಿಳಿದುಕೊಳ್ಳಬೇಕಾದ ಪುಸ್ತಕ

ಸಾಲಿಗ್ರಾಮ

ಸಾಲಿಗ್ರಾಮ ಉತ್ಪತ್ತಿ, ಸಿಗುವ ಸ್ಥಳ, ಪ್ರಕಾರಗಳು, ಆಕಾರಗಳು, ಲಕ್ಷಣಗಳು, ಫಲಗಳು, ಸಂಕ್ಷಿಪ್ತ ಪೂಜಾ ಪದ್ಧತಿ, ದೇವ ಮಂದಿರದಲ್ಲಿ ಅನುಸರಿಸಬೇಕಾದ ನಿಯಮಗಳು ಇತ್ಯಾದಿಗಳಿಂದ ಕೂಡಿದ ಸಕಲರಿಗೂ ಉಪಯುಕ್ತವಾದ ಧಾರ್ಮಿಕ ಪುಸ್ತಕ

- ಬರೆದವರು -

ಶ್ರೀ ಕೃಷ್ಣಾಚಾರ್ಯ ರಂಗಾಚಾರ್ಯ ನವರತ್ನ, ಧಾರವಾಡ

ಪ್ರಕಾಶಕರು

ಶ್ರೀ ವೈಭವಲಕ್ಷ್ಮೀ ಪ್ರಕಾಶನ

C/o. ಕೆ.ಎಸ್. ಕುಲಕರ್ಣಿ ಬುಕ್ ಡಿಪೋ, ಸ್ಟೇಶನ್ ರೋಡ, ಹುಬ್ಬಳ್ಳಿ, ಮೊ.: 93412-98280

ಭಾರತೀಯರು ಪೂಜಿಸುವ ಎಲ್ಲ ಸಂಕೇತ ಪ್ರತೀಕ ಪವಿತ್ರ ವಸ್ತುಗಳಲ್ಲಿಯೂ ದೇವರನ್ನು ಕಾಣಬಹುದು. ಅಪ್ರಬುದ್ಧರಿಗೆ ನಂಬಿಕೆ ಇಲ್ಲದೆ ಯಾವ ಮತದವರಾಗಲೀ, ದೇಶದವರಾಗಲೀ, ಕಾಲದವರಾಗಲೀ ಅವರಿಗೆಲ್ಲ ದೇವರು ಎಂದೂ ಕಾಣಲಾರನು. ಅರ್ಥ ಮಾಡಿಕೊಳ್ಳದ ಮೂಢ ಮಗುವಿನಂತೆ ಅವರ ಸ್ಥಿತಿ ಇರುತ್ತದೆ.

ವೈಜ್ಞಾನಿಕ ಮನೋಭಾವದ ಅವಶ್ಯಕತೆಯ ಅತಿರೇಕದ ಪ್ರಚಾರಕ ದೀಕ್ಷಿತರೆನಿಸಿದವರಿಗೂ ಇಂದಿನ ಕಾಲದಲ್ಲಿ ಭಾರತೀಯರ ಪೂಜಾ ಪದ್ಧತಿ, ವಿಗ್ರಹ ಪೂಜೆ, ಸಂಕೇತ ಸಾಲಿಗ್ರಾಮ, ಶಿವಲಿಂಗ ಇತ್ಯಾದಿಗಳಲ್ಲಿ ದೇವರನ್ನು ಕಂಡು ಅರ್ಚಿಸುವ ರೂಢಿಗೆ ವಿಕೃತ ಮನಸ್ಸಿನವರೆಂದು ಜರೆಯುವವರು ಬಹಳಷ್ಟು ಜನರಿದ್ದಾರೆ. ಅನೇಕ ದಶಕಗಳ ಕಾಲ ಭಾರತೀಯರು ಪರಕೀಯ ದಾಳಿ ಆಕ್ರಮಣ ಧರ್ಮಾಂತರ ಧನಕ್ಕೆ ಮತಾಂತರರಾಗಿ ಅವರೇ ನಮ್ಮ ಸಂಸ್ಕೃತಿಯನ್ನು ಟೀಕಿಸುತ್ತಿದ್ದಾರಲ್ಲದೆ ನಮ್ಮ ಈ ಪೂಜಾ ಪದ್ಧತಿಗೆ ವಿರೋಧಿಸುತ್ತಲೂ ಬಂದಿದ್ದಾರೆ. ಅಷ್ಟೇ ಅಲ್ಲ ಇಂದಿಗೂ ವಿರೋಧಿಸುತ್ತಲೇ ಇದ್ದಾರೆ. ಇದನ್ನೆಲ್ಲ ಇಲ್ಲಿ ಹೇಳಬೇಕಾದ ಪ್ರಮೇಯ ಇಷ್ಟೇ ! ದೃಷ್ಟಿ ಶುದ್ಧ ಇಲ್ಲದೆ ಹೋದರೆ ಕಾಣಬೇಕಾದದ್ದನ್ನು ಕಾಣಲಾರದೇ ವಿಚಿತ್ರ

ವರ್ತನೆ ವಿಚಿತ್ರ ಕಾರ್ಯ ಅನರ್ಥದ ಕೃತಿ–ವಿಕೃತ ಹೇಳಿಕೆ ನೀಡಿ ಜನರನ್ನು ತಪ್ಪು ದಾರಿಗೆ ಕೊಂಡೊಯ್ಯುವ ಜನರಿಗೇನು ಕಡಿಮೆ ಇಲ್ಲ.

ದೇವರು ಎಂದರೆ ಭೌತಿಕ ವಸ್ತುವಲ್ಲ. ರಾಸಾಯನಿಕ ವಸ್ತುವೂ ಅಲ್ಲ. ಅವನು ಭೌತ–ಭೌತಾತೀಕ ವಸ್ತು. ವಿಚಾರ, ಭಾವನೆ–ಕಲ್ಪನೆಗಳೆಲ್ಲದರಲ್ಲಿಯೂ ಇದ್ದಾನೆ. ಪ್ರತಿಮೆ ಪ್ರತೀಕ ಸಂಕೇತಗಳಲ್ಲಿ ಅವನ ದಿವ್ಯ ಸಾನಿಧ್ಯವನ್ನು ಆಸ್ತಿಕರು ಕಾಣುತ್ತಾರೆ. ಇಂತಹ ಪ್ರತೀಕಗಳಲ್ಲಿ ಒಂದಾದ ಸಾಲಿಗ್ರಾಮಕ್ಕೆ ತನ್ನದೇ ಆದ ಒಂದು ವೈಶಿಷ್ಟ್ಯವಿದೆ. ಕಲ್ಪನೆಗಳು ಉಗಮವಾಗುವದೇ ಅವನಿಂದ. ವೇದ, ಉಪನಿಷತ್ತು, ಇತಿಹಾಸ, ಪುರಾಣ, ಆಗಮಗಳೆಲ್ಲವೂ ಈ ಸತ್ಯಸಂಗತಿಯನ್ನು ಹೇಳುತ್ತವೆ. ಭೌತಾತೀತ ದಿವ್ಯಶಕ್ತಿಯನ್ನು ಭೌತ ವಸ್ತುಗಳಲ್ಲೂ ಬೇರೆಡೆಯಲ್ಲೂ ಕಾಣುವ ಕಣ್ಣಿನ ಸಂಸ್ಕರಣವೇ ಯೋಗ. ಅದೇ ಯಾಜ್ಞಿಕರ ಯಾಗ. ಇಂತಹ ಎಲ್ಲ ದಾರಿಗಳ ಕೊನೆಯ ನಿಟ್ಟಿನಲ್ಲಿ ಸಾಗಬೇಕೆಂದರೆ ಸಾಲಿಗ್ರಾಮೋಪಾಸನೇ ಭಾರತೀಯರ ಪೂಜಾ ಪದ್ಧತಿಯಲ್ಲಿ ತುಂಬ ಮಹತ್ವವನ್ನು ಪಡೆದಿದೆ.

ಸಾಲಿಗ್ರಾಮದ ಬಗ್ಗೆ ಅನೇಕ ವಿಷಯಗಳನ್ನು ತಿಳಿಯಪಡಿಸಲು ಎಷ್ಟೇ ಪ್ರಯತ್ನ

ಮಾಡಿದರೂ ಸಾಧ್ಯವಾಗದ ಪ್ರಯತ್ನವು ಸಾಲಿಗ್ರಾಮದ ಬಗ್ಗೆ ಎಷ್ಟೇ ವರ್ಣಿಸಿದರೂ ಕಡಿಮೆ. ಇದರ ಬಗ್ಗೆ ಬಲ್ಲವರು ಬಹಳಷ್ಟು ವಿದ್ವಾಂಸರಿದ್ದಾರೆ. ಸಾಲಿಗ್ರಾಮಗಳಲ್ಲಿ ಒಂದು ತರಹವೇ? ಎರಡು ತರಹವೇ? ನೂರೆಂಟು ತರಹದ ವಿಭಿನ್ನ ವಿಭಿನ್ನಗಳು ಅವೆ. ಎಲ್ಲದರ ಬಗ್ಗೆಯೂ ಮಾಹಿತಿ ಮಾಡಿಕೊಡುವದು ಅಸಾಧ್ಯವು. ನಿತ್ಯ ನಮ್ಮ ನಮ್ಮ ಮನೆಗಳಲ್ಲಿ ಕಂಡುಬರುವ ಸಾಲಿಗ್ರಾಮಗಳ ಆಕಾರ, ಗಾತ್ರ, ತೂಕ, ಲಕ್ಷಣ, ಫಲ, ಬಣ್ಣ, ಪೂಜಾ ಪದ್ಧತಿ ಇತ್ಯಾದಿಗಳ ಬಗ್ಗೆ ಈ ಪುಸ್ತಕದಲ್ಲಿ ಬರೆಯಲಾಗಿದೆ.

ದೇವತಾ ಪ್ರತೀಕಗಳ ಸಮುಚ್ಚಯವು ಋಗ್ವೇದವು. ಇದರ ತತ್ವವನ್ನು ಕ್ರಿ.ಶ. ಪೂರ್ವ ಸುಮಾರು ಐದನೆಯ – ಆರನೆಯ ಶತಮಾನದಲ್ಲಿ ಯಾಸ್ಕ ಮಹರ್ಷಿಗಳೂ ನಂತರ ಶೌನಕ ಮಹರ್ಷಿಗಳೂ ನಿರುಕ್ತ ಮತ್ತು ಬೃಹದೇವತಾ ಎಂಬ ಗ್ರಂಥಗಳಲ್ಲಿ ವಿಪುಲವಾಗಿ ಚರ್ಚಿಸಿ ಒಬ್ಬನೇ ದೇವನ ಹಲವು ಹತ್ತು ದಿವ್ಯ ಕಾರ್ಯಕ್ಷೇತ್ರಗಳ ಮುಖವನ್ನು ಆಧಾರವಾಗಿಟ್ಟುಕೊಂಡು, ಪುರಾಣ, ಆಗಮನ, ವಿಸ್ತೃತ ದೇವತಾ ಸ್ವರೂಪ, ಅವನ ವರ್ಣನೆಯನ್ನೂ ದೇವ ಪತ್ನಿಯರನ್ನೂ, ದೇವ ವಾಹನವನ್ನೂ, ವೈಶಿಷ್ಟ್ಯವನ್ನೂ ಹೇಳಲಾಗಿದೆ.

ಯಜು, ಸಾಮ, ಅಥರ್ವಣ ವೇದಗಳಲ್ಲಿಯೂ ಅಲ್ಲಲ್ಲಿ ಪ್ರತೀಕಗಳೂ, ಉಪಾಸನೆಗಳೂ ಹೇಗೆ ಮಾಡಬೇಕೆಂಬುದನ್ನು ತಿಳಿಸಿದ್ದಾರೆ. ಉಪಾಸಕನ ನಿಷ್ಠೆ ಮನಃಶುದ್ಧಿ ಇದನ್ನು ಅವಲಂಬಿಸಿ ಫಲ ಸಿಗುತ್ತದೆ. ಇದು ಇಲ್ಲದವನಿಗೆ ಫಲ ಸಿಗಲಾರದೆಂದು ಸ್ಪಷ್ಟ ತಿಳಿದುಬರುತ್ತದೆ. ಕೃತಯುಗ, ತ್ರೇತಾಯುಗ, ದ್ವಾಪರ ಯುಗಗಳಲ್ಲಿಯೂ ಅರ್ಚ್ಯಾ ಮೂರ್ತಿಗಳ ಪೂಜೆ ಉಪಾಸನೆ ಇತ್ತೆಂಬುದು ಇತಿಹಾಸ – ಪುರಾಣಗಳಿಂದ ತಿಳಿದು ಬರುತ್ತದೆ. ಇಂದಿಗೂ ನಾವು ಕೇಳುತ್ತಲಿದ್ದೇವೆ. ಕೆಲವು ದೇವತಾ ಮೂರ್ತಿಗಳು ಆ ಋಷಿಗಳು ಸ್ಥಾಪಿಸಿದ್ದು, ಈ ಋಷಿಗಳು ಸ್ಥಾಪಿಸಿದ್ದು ಶ್ರೀರಾಮನು ಸ್ಥಾಪಿಸಿದನು. ಪ್ರಲ್ಹಾದನು ಸ್ಥಾಪಿಸಿದನು. ಹೀಗೆ ಎಷ್ಟೋ ಮಹಾ–ಮಹಾಮುನಿಗಳ ಮಹಾಪುರುಷರ ದೇವತೆಗಳ ಹೆಸರು ಹೇಳುತ್ತ ಆ ಮೂರ್ತಿಗಳನ್ನು ಭಾರತೀಯರಾದ ನಾವು ಇಂದಿಗೂ ಶ್ರದ್ಧಾಭಕ್ತಿಯಿಂದ ಪೂಜೆ ಮಾಡುತ್ತ ಆರಾಧಿಸುತ್ತ ಬಂದಿದ್ದೇವೆ ಬರುತ್ತಿದ್ದೇವೆ. ಇಂತಹ ದೇವಾಲಯದ ದೇವರ ಮೂರ್ತಿಯ ಪ್ರತೀಕವಾಗಿ ಒಂದು ಉತ್ಸವದ ಮೂರ್ತಿಯನ್ನೂ ಇಡುತ್ತೇವೆ. ಇಂತಹ ದೇವಾಲಯಗಳ ದೇವರ ಹತ್ತಿರದ ಉತ್ಸವದ ಮೂರ್ತಿಗೆ ಶುದ್ಧತೆ ಕಳೆ ಪ್ರತಿಷ್ಠೆ ಗೌರವ ಇತ್ಯಾದಿ ಬರಲೆಂದು

ಅದರ ಪಕ್ಕದಲ್ಲಿ ಒಂದು ಸಾಲಿಗ್ರಾಮವನ್ನಿಟ್ಟು ಪೂಜಿಸುವದನ್ನು ನಾವು ಎಲ್ಲ ಕಡೆಗೂ ನೋಡುತ್ತಿದ್ದೇವೆ. ಅಂದಮೇಲೆ ಅನಾದಿಕಾಲದಿಂದಲೂ ಈ ಸಾಲಿಗ್ರಾಮ ಪೂಜಾ ಪದ್ಧತಿಯು ನಡೆದು ಬಂದಿದೆ ಎಂದು ತಿಳಿದುಬರುತ್ತದೆ. ಭಾರತ ದೇಶದ ಕೆಲವು ಕಡೆಗಳಲ್ಲಿ ಸಾಲಿಗ್ರಾಮದ ಶಿಲೆಯಲ್ಲಿಯೇ ಅಂದವಾದ ಮೂರ್ತಿಗಳನ್ನು ಮಾಡಿ ಅದಕ್ಕೆ ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿಸಿದ ಸಂಗತಿಗಳು ನಮ್ಮ ಮುಂದೆ ಸಾಕಷ್ಟಿವೆ. ಆದರೆ ಇಂತಹ ಪ್ರಸಿದ್ಧ ದೇವಾಲಯಗಳ ಮೇಲೆ ಮುಸಲ್ಮಾನರ ಆಳಿಕೆಯಲ್ಲಿಯೂ, ಮೊಗಲರ ಆಳ್ವಿಕೆಯಲ್ಲಿಯೂ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯೂ ದಾಳಿಕಾರರ ದಾಳಿಗೆ ನಮ್ಮ ಪುಣ್ಯಪವಿತ್ರವಾದ ದೇವಾಲಯಗಳು ಬಹಳಷ್ಟು ಹೇಳಿ ಹೆಸರಿಲ್ಲದೇ ನಾಶವಾಗಿ ಹೋದವು. ಆದರೂ ನಮ್ಮ ಭಾರತೀಯರು ಹೆಮ್ಮೆಯಿಂದ ಹಾಗೂ ಶ್ರದ್ಧಾಭಕ್ತಿಯಿಂದ ಪುನಃ ಪುನಃ ಪ್ರತಿಷ್ಠಾಪನೆ ಜೀರ್ಣೋದ್ಧಾರ ಮಾಡುತ್ತಲೇ ಬಂದಿದ್ದಾರೆ. ಅಲ್ಲದೆ ಹಿಂದಿನ ವೈಭವದ ಸ್ಥಿತಿಗೆ ತಂದು ಮುಂದಿನ ನಮ್ಮ ಜನಾಂಗಕ್ಕೆ ಆದರ್ಶಪ್ರಾಯರಾಗಿದ್ದಾರೆ. ಇದೊಂದು ನಮ್ಮ ಹೆಮ್ಮೆಯ ವಿಷಯವೇ ಸರಿ, ಕೆಲವು ಕಡೆ ಮೂರ್ತಿ ಬದಲಾಗಿರಬಹುದು ಆದರೆ

ಅವನು ದೇವನಲ್ಲವೇ? ಅಂತು ದೇವಾಲಯಗಳೂ ಮೂರ್ತಿ ಪೂಜೆಯು ಎಷ್ಟು ಹಳೆಯದಿದೆಯೋ ಅಷ್ಟೇ ಸಾಲಿಗ್ರಾಮದ ಪೂಜೆಯೂ ಹಳೆಯದು.

ಶ್ರೀ ರಂಗನಾಥದಲ್ಲಿರುವ ರಂಗನಾಥ ದೇವರನ್ನು ಸ್ವತಃ ಪ್ರಭು ಶ್ರೀರಾಮಚಂದ್ರನು ಪೂಜಿಸಿ ಮುಂದೆ ಅದನ್ನು ವಿಭೀಷಣನಿಗೆ ಕೊಟ್ಟನೆಂದೂ ಮುಂದೆ ಆ ರಂಗನಾಥ ಸ್ವಾಮಿಯನ್ನು ಶ್ರೀರಂಗದಲ್ಲಿ ಸ್ಥಾಪಿಸಲ್ಪಟ್ಟಿತೆಂದೂ ನಂಬಿಕೆಯು. ಬಬ್ರುವೆಂಬುವನು ತನ್ನ ಮಗನೊಂದಿಗೆ ಹಾಗೂ ತನ್ನ ಮಿತ್ರ ಸಾಮಂತರೊಂದಿಗೆ ತನ್ನ ಪ್ರದೇಶದಲ್ಲಿ ಸಹಸ್ರಾರು ವಿಷ್ಣು ಮಂದಿರಗಳನ್ನು ಕಟ್ಟಿಸಿ, ಅಲ್ಲಿ ಸಾಲಿಗ್ರಾಮದಲ್ಲಿ ವಿಷ್ಣು ಮೂರ್ತಿಗಳನ್ನು ನಿರ್ಮಿಸಿ ಸ್ಥಾಪಿಸಿದನು. ಕಾಲಾಂತರದಲ್ಲಿ ಈ ಎಲ್ಲ ಗುಡಿ ದೇವಾಲಯಗಳು ಪರಕೀಯರ ದಾಳಿಗೆ ತುತ್ತಾದಾಗ ಅಲ್ಲಿರುವ ಮೂರ್ತಿ ಸಹಿತ ಅಸಂಖ್ಯಾತ ಸಾಲಿಗ್ರಾಮಗಳು ಜನರ ಕೈಸೇರಿ ಮನೆ–ಮಠಗಳ ಪಾಲಾಗಿವೆ.

ಸಾಲಿಗ್ರಾಮಗಳಲ್ಲಿ ರಂಧ್ರ ಇರುವ ಆಕಾರದ ಮೂರ್ತಿಗಳನ್ನೂ ಬರೀಚಕ್ರ ರೂಪದ ಸುದರ್ಶನಗಳನ್ನೂ ಯಾವ ಚಿನ್ಹವೂ ಹೊರಗೆ ಕಾಣದ ದುಂಡಗಿನ ಆಕಾರದ ಹಿರಣ್ಯ

ಗರ್ಭ ಮೂರ್ತಿಗಳನ್ನೂ ಬಿಟ್ಟರೆ ಸ್ಪಷ್ಟ ಆಕಾರ ಚಿನ್ಹೆಗಳಿಲ್ಲದ ಸಾದಾ ಸಾಲಿಗ್ರಾಮ ಶಿಲೆಯಲ್ಲಿ ಶಿಲ್ಪಿಗಳು ಅನೇಕ ದೇವರ ಮೂರ್ತಿಗಳನ್ನು ಕೊರೆದು ಅಲ್ಲಲ್ಲಿ ಪ್ರತಿಷ್ಠಾಪಿಸಿ ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿದ್ದು ಉಂಟು. ಇಂತಹ ಪ್ರಾಚೀನ ದೇವಾಲಯಗಳಲ್ಲಿ ಒಂದಾದ ಬದರಿಯ ದೇವಾಲಯವೂ ಹೌದು.

ಬದರಿಯ ನಾರಾಯಣ ಮೂರ್ತಿಯನ್ನು ಒಮ್ಮೆ ಬೌದ್ಧರು ಕಿತ್ತಿ ಅದನ್ನು ಹತ್ತಿರದ ಅಲಕನಂದಾ ನದಿಯ ಗರುಡ ಕುಂಡದಲ್ಲಿ ಬೀಸಾಕಿದಾಗ ಮೂರ್ತಿ ಇಲ್ಲದೆ ಎಷ್ಟೋ ವರ್ಷಗಳ ಕಾಲ ಹಾಗೆಯೇ ಇತ್ತು. ಒಮ್ಮೆ ಶ್ರೀ ಶ್ರೀ ಆದಿಶಂಕರಾಚಾರ್ಯರು ಅಲ್ಲಿಗೆ ಹೋಗಿ ಕೆಲವು ದಿನಗಳ ಕಾಲ ಅಲ್ಲಿ ಇದ್ದು, ಆ ಮೂರ್ತಿಯನ್ನು ಹುಡುಕಿಸಿ ಹೊರತಂದು ಪುನಃ ಸ್ಥಾಪಿಸಿ ವೈಭವದಿಂದ ಪೂಜಾದಿಗಳನ್ನು ಮಾಡಿ ತಿರುಗಿ ಬಂದರು. ಪುನಃ ಎಷ್ಟೋ ವರ್ಷಗಳ ನಂತರ ಮತ್ತೊಮ್ಮೆ ಹೀಗಾದಾಗ ವಿಶಿಷ್ಟಾ ದ್ವೈತಮತ ಸ್ಥಾಪಕರಾದ ಶ್ರೀ ಶ್ರೀ ರಾಮಾನುಜಾಚಾರ್ಯರು ಪುನಃ ಪ್ರತಿಷ್ಠಾಪಿಸಿದರೆಂದೂ ತಿಳಿದುಬರುತ್ತದೆ.

ಅನೇಕ ವರ್ಷಗಳಿಂದಲೂ ಒಂದೊಂದು ಮುಷ್ಟಿಯಷ್ಟು ಹಿಡಿದು ದೊಡ್ಡ ದೊಡ್ಡ

ಸಾಲಿಗ್ರಾಮದ ಶಿಲೆಗಳಲ್ಲಿ ನಾಜೂಕಾಗಿ ರಂಗನಾಥ, ಕೃಷ್ಣ, ವೆಂಕಟೇಶ, ವಿಷ್ಣು, ನಾರಾಯಣ, ಲಕ್ಷ್ಮೀ, ಶೇಷ ಹೀಗೆ ನೂರೆಂಟು ದೇವತೆಗಳನ್ನು ಜನತೆಯ ಇಚ್ಛಿತ ಬೇಡಿಕೆಯ ಪ್ರಕಾರ ಮೊದಮೊದಲು ಕೈಗಾಡದಿಂದ ಕೊರೆಕೊರೆದು ತಯಾರಿಸಿ ಕೊಡುತ್ತಿದ್ದರು. ಆದರೆ ಇತ್ತೀತ್ತಲಾಗಿ ಜಪಾನ್-ಚೀನಾ ದೇಶಗಳಿಂದ ಸೂಕ್ಷ್ಮವಾದ ಸೂಕ್ತವಾದ ಉಳಿಗಳು ಲಭ್ಯವಾಗಿದ್ದರಿಂದ ಸಾಲಿಗ್ರಾಮ ಶಿಲೆಯಲ್ಲಿ ಮೂರ್ತಿಗಳನ್ನು ಮನೋಹರವಾಗಿ ಕೆತ್ತಿ ಸಾವಿರಾರು ರೂಪಾಯಿಗಳಿಗೆ ಮಾರುತ್ತಿದ್ದಾರೆ. ಇದರ ಬೇಡಿಕೆಯೂ ಹೆಚ್ಚಾಗಿದೆ. ಇಂತಹ ಆಕರ್ಷಕ ಸುಂದರ ಮೂರ್ತಿಗಳು ಭಾರತದ ತುಂಬೆಲ್ಲ ಸಾವಿರಾರು ಮಠ-ಮಂದಿರಗಳಲ್ಲಿ ವಿರಾಜಮಾನವಾಗಿ ಶೋಭಿಸುತ್ತಿವೆ. ಅಂತಹ ಮೂರ್ತಿಗಳಲ್ಲಿರುವ ಮನೆಗಳ ಹಿರಿಯರು ತಮ್ಮ ಜೀವನ ಪುರುಷಾರ್ಥಕವಾಗಿದೆ ಎಂದು ಆನಂದದಿಂದ ಶ್ರದ್ಧಾಭಕ್ತಿಯಿಂದ ಪೂಜಿಸುತ್ತಿದ್ದಾರೆ.

ಸಾಲಿಗ್ರಾಮ ಸಿಗುವ ಸ್ಥಳ

ಸಾಲಿಗ್ರಾಮ ಎಂಬ ಒಂದು ಬಗೆಯ ಪೂಜಾರ್ಹ ಶಿಲೆಯು. ಭಾರತದ ಉತ್ತರ ಭಾಗದಲ್ಲಿರುವ ಹಿಂದು ರಾಜ್ಯವಾದ ನೇಪಾಳದಲ್ಲಿ ಹರಿಯುವ ಗಂಡಕೀ ನದಿಯಲ್ಲಿ

ಮಾತ್ರ ದೊರೆಯುತ್ತದೆ. ಈ ನದಿಗೆ ನಾರಾಯಣಿ ಶಾಲಿಗ್ರಾಮ, ಹಿರಣ್ವತಿ ಮತ್ತು ಹಿರಣ್ಯವತಿ ಎಂಬ ಹೆಸರುಗಳಿವೆ. ಈ ನದಿಯ ಒಂದು ಸ್ಥಳವಾದ ಚಕ್ರತೀರ್ಥ ಎಂಬ ಸ್ಥಳದಲ್ಲಿ ಸುಮಾರು ೩೦-೩೫ ಮೈಲಿನಷ್ಟು ಸುತ್ತು ಹಾಕಿಕೊಂಡ ಸ್ಥಳದಲ್ಲಿಯೇ ಈ ಸಾಲಿಗ್ರಾಮಗಳು ದೊರೆಯುತ್ತವೆ. ಈ ಸ್ಥಳವು ವಿಶ್ವಾಮಿತ್ರನ ಮಗನಾದ ಶಾಲಂಕಾಯನ ಋಷಿಯು ವಿಷ್ಣುವಿನಿಂದ ಜ್ಞಾನಸಿದ್ಧಿಗಾಗಿ ಘೋರ ತಪಸ್ಸನ್ನು ಮಾಡಿದ ಪುಣ್ಯಸ್ಥಳವೂ ಹೌದು. ಈ ನದಿಯ ತಳದ ತಟದಲ್ಲಿಯ ಒಂದೊಂದು ಶಿಲೆಯೂ ಪೂಜಾರ್ಹವು.

ಸಾಲಿಗ್ರಾಮ ಎಂಬುದು ನಿಜವಾಗಿ ಗಂಡಕೀ ನದಿತೀರದಲ್ಲಿರುವ ಒಂದು ಗ್ರಾಮದ ಹೆಸರು. ಮೊದಲು ಇದಕ್ಕೆ 'ಸಾರಗ್ರಾಮ' ಎಂದು ಹೆಸರು ಇತ್ತು. ಜನರ ಬಾಯಿಯಿಂದ ಕ್ರಮೇಣ ಬದಲಾಗುತ್ತ ಸಾಲಿಗ್ರಾಮವಾಯಿತು. ಇಲ್ಲಿ ಸಾಲವೆಂಬ ಮರಗಳು ಹೇರಳವಾಗಿ ಇವೆ. ಕಾಲೀ (ಕೃಷ್ಣಾ) ಗಂಡಕೀಯ ಮೂಲದಲ್ಲಿ ದಾಮೋದರ ಕುಂಡವೆಂಬ ಕೊಳವಿದೆ. ಭಾರತ-ನೇಪಾಳದ ಗಡಿಯಲ್ಲಿ ಮುಕ್ತನಾಥ ಎಂಬ ಕ್ಷೇತ್ರವೂ ಪ್ರಸಿದ್ಧಿಯಾಗಿದೆ. ಸಾಲಿಗ್ರಾಮ ಕ್ಷೇತ್ರವೆಂದೂ ಹೆಸರಾಗಿದೆ. ಧವಲಗಿರಿ ಮತ್ತು ಅನ್ನಪೂರ್ಣಾ ಪರ್ವತಗಳ ನಡುವಿನ ತುಕ್ಚೆ

ಎಂಬ ಸ್ಥಳದ ಸಮೀಪ ಕಾಲೀ–ಗಂಡಕೀ ನದಿ ಹರಿಯುತ್ತದೆ. ಇನ್ನೊಂದು ಕ್ಷೇತ್ರವೆಂದರೆ ದಾಮೋದರ ಮತ್ತು ಸೋಮೇಶ್ವರ ಕ್ಷೇತ್ರಗಳು ಸೋಮೇಶ್ವರ ಕ್ಷೇತ್ರವು ಶೈವರಿಗೆ ಪವಿತ್ರ ಯಾತ್ರಾ ಸ್ಥಳವು. ಶಿವರಾತ್ರಿಯ ಸಂದರ್ಭದಲ್ಲಿ ನೇಪಾಳದ ದೊರೆಯು ಸೋಮೇಶ್ವರ ಕ್ಷೇತ್ರಕ್ಕೆ ಬಂದಾಗ ಗಂಡಕೀ ನದಿಯಿಂದ ಆರಿಸಿ ತರಲಾದ ಶ್ರೇಷ್ಠ ಶ್ರೇಷ್ಠ ಸಾಲಿಗ್ರಾಮಗಳನ್ನು ಸ್ವೀಕರಿಸುತ್ತಾರೆ.

ಇದೊಂದು ಪ್ರಕೃತಿದತ್ತವಾದ ವಿಶಿಷ್ಠ ಜಾತಿಯ ಒಂದು ಶಿಲೆಯು ವಿಷ್ಣುವಿನ ಅವತಾರ ಅಲ್ಲವೇ ಅಲ್ಲ. ವಿಷ್ಣುವಿನ ಪ್ರತೀತವಷ್ಟೇ ಯಾವ ದೇವರ ಅವತಾರವೂ ಅಲ್ಲ. ಮಾನವ ನಿರ್ಮಿತ ವಿಗ್ರಹಕ್ಕಿಂತಲೂ ಅತಿ ಶ್ರೇಷ್ಠ ಶಿಲೆಯು ಮಹಾವಿಷ್ಣುವಿನ ಪ್ರತೀಕವಾದ ಈ ಸಾಲಿಗ್ರಾಮವು ತ್ರಿಮತಸ್ಥರಿಗೂ ಪೂಜ್ಯವಾಗಿದೆ. ಏಕೆಂದರೆ ಮಹಾವಿಷ್ಣುವು ತ್ರಿಮತಸ್ಥರಿಗೂ ಪೂಜ್ಯನು.

ಇಂತಹ ಸಾಲಿಗ್ರಾಮಗಳು ಸಿಗುವ ಆ ಗಂಡಕೀನದಿಯ ಕ್ಷೇತ್ರವು ಭಾರತೀಯರಿಗೆ ಪರಮ ಪವಿತ್ರವಾದ ಸ್ಥಳ. ಈ ಕ್ಷೇತ್ರಕ್ಕೆ ಹೋಗಿ ಸ್ನಾನ ಮಾಡಿ ದರ್ಶನ ತೆಗೆದುಕೊಂಡು

ಬಂದ ಹಿಂದುಗಳಿಗೆ ಅಂತ್ಯದಲ್ಲಿ ಮೋಕ್ಷ ಪ್ರಾಪ್ತವಾಯಿತೆಂದು ಬಲವಾದ ವಿಶ್ವಾಸವು. ಜನ್ಮ ಜನ್ಮಾಂತರದ ಪಾಪವೆಲ್ಲವೂ ಭಸ್ಮವಾಗಿ ಮುಕ್ತಿ ಹೊಂದಿದಂತೆಯೇ. ಅಂತೆಯೇ ಕೋಟಿ ಕೋಟಿ ಸಂಪತ್ತಿದ್ದು ಮನೆಯಲ್ಲಿ ಒಂದು ಸಾಲಿಗ್ರಾಮವಿಲ್ಲದಿದ್ದರೆ ಆ ಮನೆ ಮತ್ತು ಸಂಪತ್ತು ಮಸಣವಂತೆ. ಸಂಪತ್ತು ಇಲ್ಲದಿದ್ದರೂ ಮನೆಯಲ್ಲಿ ಸಾಲಿಗ್ರಾಮವಿದ್ದರೆ ಸಾಕು ಆ ಮನೆ ಸುರಲೋಕವಂತೆ. ಇಂತಹ ಶ್ರೇಷ್ಠತ್ವ ಹೊಂದಿದ ಶಿಲೆಯಲ್ಲಿ ಉಡುಪಿಯ ಶ್ರೀಕೃಷ್ಣನೂ, ಪಂಢರಾಪುರದ ಶ್ರೀ ಪಾಂಡುರಂಗನೂ, ಬದರಿಯ ಶ್ರೀ ನಾರಾಯಣನೂ ಅಲ್ಲದೆ ಇನ್ನೆಷ್ಟೋ ದೇವಾಲಯಗಳಲ್ಲಿ ಇಂತಹ ವಿಗ್ರಹಗಳು ಭಾರತದಲ್ಲಿ ಕಂಡುಬರುತ್ತವೆ. ಇದರಲ್ಲಿ ಮನುಷ್ಯ ಮತ್ತು ಸ್ವಯಂಭೂ ಎಂಬ ಪ್ರಭೇದಗಳು ಇಲ್ಲವೇ ಇಲ್ಲ. ಅಂತೆಯೇ ಎಲ್ಲರಿಗೂ ಪರಮ ಪೂಜ್ಯವಾಗಿವೆ.

ಸಾಲಿಗ್ರಾಮಗಳನ್ನು ಮಾರುವದು ಶಾಸ್ತ್ರಾನುಸಾರವಾಗಿ ನಿಷಿದ್ಧವು. ಆದರೂ ಇದು ನೇಪಾಳ ರಾಜ್ಯಕ್ಕೆ ಆದಾಯದ ಮೂಲವಾಗಿದೆ. ಕಾರಣ ನೇಪಾಳ ಸರಕಾರವು ಸಾಲಿಗ್ರಾಮಗಳು ಸಿಗುವ ಸ್ಥಳವನ್ನು ಖಾಸಗೀ ಉದ್ಯಮಿಗಳಿಗೆ ಗುತ್ತಿಗೆಗೆ ನೀಡಿವೆ. ಗುತ್ತಿಗೆದಾರರು ತಾವು

ಸಂಗ್ರಹಿಸಿದ ಸಾಲಿಗ್ರಾಮಗಳನ್ನು ಅರಮನೆಗೆ ತಂದೊಪ್ಪಿಸುವರು. ಅದರಲ್ಲಿ ರಾಜ ಕುಟುಂಬವು ಅತ್ಯಂತ ಅಮೂಲ್ಯವಾದ ಸಾಲಿಗ್ರಾಮಗಳು ಯಾವವು ಎಂಬುದನ್ನು ಕಂಡುಹಿಡಿದು ತಮ್ಮ ವಶದಲ್ಲಿ ಇಟ್ಟುಕೊಳ್ಳುವರು. ಮುಂದೆ ಆ ಗುತ್ತಿಗೆದಾರರು ಅಸಾಧಾರಣ ಬೆಲೆಗೆ ಮಾರಿಕೊಳ್ಳುತ್ತಿದ್ದಾರೆ.

ಬ್ರಹ್ಮನಿಂದ ನಿರ್ಮಿತವಾದ ಚಕ್ರಾನದಿಯಲ್ಲಿಯೂ ವಿಶೇಷವಾದ ವಿಷ್ಣು ಸಾಲಿಗ್ರಾಮಗಳು ದೊರಕುವುದಲ್ಲದೆ ಭೂಗರ್ಭದಲ್ಲಿಯೂ ಹಾಗೂ ಹಿಮಪರ್ವತದಲ್ಲಿಯೂ ಸಿಗುವುದುಂಟು.

ಸಾಲಿಗ್ರಾಮದ ಸೃಷ್ಠಿ ಪುರಾಣೋಕ್ತ

ಸಾಲಿಗ್ರಾಮದ ಉತ್ಪತ್ತಿ ಒಂದು ವಿಚಿತ್ರವೇ ಇದೆ.ಈಗಾಗಲೇ ಮೊದಲು ಹೇಳಿದಂತೆ ಸಾಲಿಗ್ರಾಮಗಳು ಹಿಮಾಲಯ ಪರ್ವತದಲ್ಲಿರುವ ಗಂಡಕೀ ನದಿಯ ಒಂದು ವಿಶಿಷ್ಠ ಸ್ಥಳದಲ್ಲಿ ಮಾತ್ರ ಸಿಗುತ್ತವೆ. "ಗಂಡಕೀ ಉದ್ಭವ ವಜ್ರಕೀಟ ಕೃತ ಚಕ್ರ ಸಮಾಯುಕ್ತ ಶಿಲಾ" ಸ್ಕಂದ ಪುರಾಣದ ಅಸುರ ಖಂಡದಲ್ಲಿ ಇದರ ಕಥೆ ಇದೆ.

ಗಂಡಕೀ ಎಂಬ ಸಾತ್ವಿಕ ಸ್ತ್ರೀಯು ಹಿಮಾಲಯ ಪರ್ವತದಲ್ಲಿ ದೇವರೇ ತನ್ನ

ಪುತ್ರರಾಗಿ ಹುಟ್ಟಿಬರಬೇಕೆಂದು ಘನಘೋರವಾದ ತಪಸ್ಸನ್ನು ಮಾಡುತ್ತಾಳೆ. ಇವಳ ತಪಸ್ಸಿಗೆ ಮೆಚ್ಚಿ ಬ್ರಹ್ಮ-ವಿಷ್ಣು-ಮಹೇಶ್ವರರು ಅವಳೆದುರು ಪ್ರತ್ಯಕ್ಷರಾಗಿ ಒಂದು ವರವನ್ನು ಕೇಳು ಎಂದು ಹೇಳುತ್ತಾರೆ. ಆಗ ಆ ಸಾತ್ವಿಕ ಸ್ತ್ರೀಯಳು ತಾವು ಮೂವರೂ ನನ್ನ ಪುತ್ರರಾಗಿ ಹುಟ್ಟಿ ಭೂಮಿಯ ಸಮಸ್ತ ಜನಗಳನ್ನು ಸುಖಿಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಾಳೆ. ಆಗ ದೇವತೆಗಳು ಇವಳ ಬೇಡಿಕೆಗೆ ಒಪ್ಪುವದಿಲ್ಲ. ಗಂಡಕೀಯೂ ತನ್ನ ಹಟವನ್ನು ಬಿಡಲಿಲ್ಲ. ನಿರಾಶಳಾಗಿ ಕೊನೆಗೆ ಕೋಪೋದ್ರೇಕದಿಂದ ನೀವುಗಳೂ ನಿಮ್ಮ ದೇವಗಣ ಸಮೂಹವೂ ಹುಳಗಳಾಗಿರೆಂದು ಶಾಪವನ್ನು ಕೊಡುತ್ತಾಳೆ.

ದೇವತೆಗಳು ಇವಳ ಅವಿವೇಕತನಕ್ಕೆ ಮರಮರನೆ ಮರುಗಿ ನೀನು ಮಾನವಳಾಗಿರಲು ಅಯೋಗ್ಯಳು. ನಿನ್ನ ತಪಸ್ಸಿಗೆ ಸಂತುಷ್ಟರಾಗಿ ಬಂದ ನಮಗೇ ನೀನು ಶಾಪವನ್ನು ಕೊಟ್ಟಿಯಲ್ಲ. ಗಂಡಕೀ ನೀನು ಕಪ್ಪು ನೀರಿನಿಂದ ಕೂಡಿದ ನದಿಯಾಗು ಎಂದು ಪ್ರತಿ ಶಾಪವನ್ನು ಕೊಟ್ಟರು.

ಇವಳ ಶಾಪದಿಂದ ಉಳಿದ ದೇವತೆಗಳಿಗೆ ಏನೂ ತೋಚದಂತಾಯಿತು. ಈ

ಶಾಪದ ಪರಿಹಾರ ಕೇಳಲು ಬ್ರಹ್ಮನಲ್ಲಿಗೆ ಹೋದರು. ಬ್ರಹ್ಮನಿಂದ ಪರಿಹಾರ ಸಿಗಲಿಲ್ಲ. ರುದ್ರದೇವನಲ್ಲಿಗೆ ಹೋದರು. ರುದ್ರರೂ ಅಸಹಾಯಕನಾದರು. ಕೊನೆಗೆ ಎಲ್ಲರೂ ವಿಷ್ಣುವಿನಲ್ಲಿಗೆ ಹೋದರು. ಆಗ ವಿಷ್ಣುವು- ಹೇ ದೇವಗಣಗಳಿರಾ? ಗಂಡಕಿಯ ಶಾಪವು ಸುಳ್ಳಾಗದು. ಈಗ ಇದಕ್ಕೊಂದು ಉಪಾಯವೇನೆಂದರೆ ಅವಳು ನದಿಯಾಗಿ ಹರಿಯುತ್ತಾಳೆ. ಈಗ ನನ್ನ ಇಬ್ಬರು ಭಕ್ತರು ಮುನಿಗಳ ಶಾಪದಿಂದ ಜಲ ರಾಕ್ಷಸರಾಗಿ ಜನಿಸಿದ್ದಾರೆ. ಶಾಪ ವಿಮೋಚನೆ ಮಾಡಿ ಮೋಕ್ಷ ನೀಡಲು ಅವರ ದೇಹದಲ್ಲಿ ನಾನು ಪ್ರವೇಶಿಸುತ್ತೇನೆ. ನೀವುಗಳು ಅವರಿಬ್ಬರ ದೇಹ ಕೊಳೆತಾಗ ಹುಳಗಳಾಗಿ ಅವರ ಗಟ್ಟಿಯಾದ ಎಲಬುಗಳಲ್ಲಿ ಸೇರಿಕೊಳ್ಳಿರಿ. ಆಗ ನೀವು ವಜ್ರಕೀಟಕಗಳಾಗುವಿರಿ. ನೀವು ಹುಳಗಳ ರೂಪತಳೆದಾಗ ನಿಮ್ಮನ್ನು ಗಂಡಕಿಯು ತನ್ನ ಸಂತಾನವೆಂದೇ ತಿಳಿಯುತ್ತಾಳೆ. ಇದರಿಂದ ಗಂಡಕೀಯ ಶಾಪವೂ ನಿಜವಾದಂತಾಯಿತು. ನಾವೆಲ್ಲರೂ ತನ್ನ ಮಕ್ಕಳಾಗಬೇಕೆಂಬ ಅವಳ ಅಪೇಕ್ಷೆಯೂ ನೆರವೇರಿದಂತಾಯಿತು.

ವಿಷ್ಣುವು ಚಕ್ರತೀರ್ಥದಲ್ಲಿ ಚಕ್ರರೂಪದಲ್ಲಿ ಈ ಕಳೇಬರಹಗಳೊಳಗೆ ಕಾಣಿಸಿಕೊಳ್ಳುತ್ತಾನೆ.

ಗಂಡಕೀ ನದಿಯ ಕಲ್ಲುಗಳಲ್ಲಿ ಚಕ್ರಗಳಾಗಿ ಸಾಲಿಗ್ರಾಮಗಳಾಗಿವೆ. ಅಂದ ಮೇಲೆ ಗಂಡಕೀ ನದಿಯ ಸ್ನಾನದ ಶ್ರೇಷ್ಠತೆ ಎಷ್ಟು ಜಗತ್ತಿನ ಎಲ್ಲ ನದಿಗಳಿಗಿಂತಲೂ ಗಂಡಕೀನದಿ ಅತಿ ಶ್ರೇಷ್ಠವು. ಪದ್ಮ ಪುರಾಣ, ವಾರಾಹ ಪುರಾಣ ಹೀಗೆ ಕೆಲವು ಎಂಟ್ಟತ್ತು ಪುರಾಣಗಳಲ್ಲಿ ಸಾಲಿಗ್ರಾಮದ ಉತ್ಪತ್ತಿ ಪೌರಾಣಿಕವಾಗಿ ಬರೆದಿದ್ದಾರೆ.

ಭೌತಿಕ ವಿಚಾರದಲ್ಲಿ ಸಾಲಿಗ್ರಾಮ

ಅಮೋನೈಟ್ಸ್ ಎಂಬ ಬೆನ್ನೆಲಬು ಇಲ್ಲದ ಕ್ರಿಮಿಗಳ ಪಳೆಯುಳಿಕೆಗಳೇ ನಾವು ಪೂಜಿಸುವಂತಹ ಸಾಲಿಗ್ರಾಮ. ಈ ಪಳೆಯುಳಿಕೆಗಳಲ್ಲಿ ಅಮೋನೈಟ್‌ಗಳು ಮಲಸ್ಕಾಜಾತಿಯ ಪಳಯುಳಿಕೆಗಳ ವರ್ಗಕ್ಕೆ ಸೇರಿರುತ್ತವೆ. ಇವುಗಳಲ್ಲಿ ಅಸಂಖ್ಯಾತ ಭೇದವಿದೆ. ಅಮೋನೈಟ್ ಅಥವಾ ಬೆನ್ನೆಲುಬು ಇಲ್ಲದ ಮೃದ್ವಂಗಿಗಳೂ ಎಂದು ಕರೆಯುತ್ತಾರೆ. ದುಂಬಿಯ ಆಕೃತಿಯಲ್ಲಿಯೂ ಇರುವ ಇವು ತಮ್ಮ ಹೊದಿಕೆಗಾಗಿ ಕಲ್ಲುಗಳನ್ನು ತೂತು ಮಾಡಿ ಕೊರೆದು ಬಾಯಿಯಿಂದ ಒಂದು ತರಹದ ದ್ರವವನ್ನು ಹೊರತೆಗೆದು ಗೂಡು ಮಾಡಿ ಚಿಪ್ಪು ಬೆಳೆಸಿಕೊಂಡು ಕೊನೆಗೆ ಒಂಟಿತನ ಬೇಸರವಾಗಿ ತೂತಿನಿಂದ ಈಸಿ ಹೋಗುತ್ತವೆ.

ಇವಕ್ಕೆ ವಜ್ರಕೀಟಗಳೆಂದೂ ಹೆಸರು. ಇದರ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ವಿಜ್ಞಾನಿಗಳು ಮಾಡಿದ್ದಾರೆ. ಸಮುದ್ರದಲ್ಲಿರುವ ಪಳೆಯುಳಿಕೆ ಹಾಗೂ ಗಂಡಕೀನದಿಯ ಅಮೋನೈಟ್ ಪಳೆಯುಳಿಕೆ ಕಾಲಕ್ರಮೇಣದಲ್ಲಿ ಬಹಳ ವ್ಯತ್ಯಾಸವಾಗಿದೆ ಎಂದು ಕಂಡುಹಿಡಿದಿದ್ದಾರೆ.

ಭೌತಿಕ ವಿಜ್ಞಾನದಿಂದೇ ಆಗಲೀ ಅಥವಾ ಪುರಾಣಗಳ ಕಥೆಗಳಿಂದೇ ಆಗಲೀ ಪ್ರಕೃತಿದತ್ತವಾದ ವಿಶಿಷ್ಟ ಶಿಲೆಗೆ ವಿಶೇಷ ಶಕ್ತಿ ಇದೆ. ಇದನ್ನು ಬರೇ ಪಳೆಯುಳಿಕೆ ಎಂದು ತಿಳಿಯದೆ ವಿಷ್ಣುವಿನ ಅಂಶವನ್ನು ಹೊಂದಿದ ದೇವರ ಸಾನಿಧ್ಯವಿರುವ ವಿಶೇಷವಾದ ಶಿಲೆ ಎಂದು ಭಾವಿಸಬೇಕು. ಸಾಲಿಗ್ರಾಮಗಳು ಹೇಗೆ ಉತ್ಪತ್ತಿಯಾಗುತ್ತವೆ ಎಂಬುದು ಮುಖ್ಯವಲ್ಲ. ಅಲ್ಲಿ ದೇವರ ಸದಾಜಾಗೃತ ಸಾನ್ನಿಧ್ಯವಿರುತ್ತದೆ ಎಂಬುದೇ ಮುಖ್ಯವು.

"ಯಾನಿ ಕಾನಿಚ ತೀರ್ಥಾನಿ ಬ್ರಹ್ಮಾಂಡಾಂತರ್ಗತಾನಿ ವೈ ।
ವಿಷ್ಣು ಪಾದೋದಕಸ್ಯೈತೇ ಕಲಾಂ ನಾರ್ಹಂತಿ ಷೋಡಶೀಮ್ ॥"

ಭೂಮಂಡಲದಲ್ಲಿರುವ ನದಿಗಳ ತೀರ್ಥವಲ್ಲ ಬ್ರಹ್ಮಾಂಡದಲ್ಲಿರುವ ಯಾವದೇ ತೀರ್ಥವು ವಿಷ್ಣು ಸಾಲಿಗ್ರಾಮದ ತೀರ್ಥಕ್ಕೆ ಸಾಟಿ ಇಲ್ಲ. ಈ ಕಪ್ಪುಬಣ್ಣದ ಗಟ್ಟಿಯಾದ

ಭಾರವಾದ ಈ ಶಿಲೆಗಳು ವಿಷ್ಣುವಿನ ಪ್ರತಿನಿಧಿಗಳೆಂದೂ ಗೋಮತಿ ನದಿಯಲ್ಲಿಯ ಬಿಳಿಯದಾದ ದ್ವಾರಕಾ ಶಿಲೆಗಳು ಈಶ್ವರನ ಪ್ರತಿನಿಧಿಯೆಂದೂ ಈಶ್ವರ ಹಾಗೂ ವಿಷ್ಣು ಇವರಿಬ್ಬರನ್ನು ಒಟ್ಟಾಗಿ ಪೂಜಿಸಿದರೆ ನಮ್ಮ ಜನ್ಮ-ಜನ್ಮಾಂತರದ ಪಾಪಗಳು ನಾಶವಾಗುತ್ತವೆ.

ಮತ್ತೊಂದು ಸಂಗತಿಯೆಂದರೆ ಉತ್ತರ ಅಮೇರಿಕಾ ಗ್ರೀಕ್, ಜರ್ಮನ್ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲಿಯೂ ಅಮೋನೈಟ್ಸ್ ಪಳೆಯುಳಿಕೆಗಳು (ಸಾಲಿಗ್ರಾಮ ಶಿಲೆ) ಕಂಡುಬಂದರೂ ಅವು ಕಾಲಿ ಗಂಡಕೀ ನದಿಯಲ್ಲಿ ದೊರಕುವ ಸ್ವಯಂ ವ್ಯಕ್ತ ಸಾಲಿಗ್ರಾಮದಂತೆ ಹೆಚ್ಚು ಮಹತ್ವವನ್ನು ಪಡೆದಿಲ್ಲ ಹಾಗೂ ಗುಣಮಟ್ಟದವುಗಳೂ ಇಲ್ಲ.

ಗಂಡಕೀನದಿಯ ಉಗಮ ಸ್ಥಳದ ಪರ್ವತವು ಆನೆಯ ಗಂಡಸ್ಥಳದಂತಿದೆ. ಈ ರೀತಿ ಸಾಲಿಗ್ರಾಮದ ಪೂರ್ವೇತರ ಕೆಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸಲಾಗಿದೆ. ಸಾಲಿಗ್ರಾಮದ ಆಕಾರಗಳು ಪೂಜಿಸುವದು ಸಾಲಿಗ್ರಾಮದ ಲಕ್ಷಣಗಳು. ಅದರ ಫಲ ಇತ್ಯಾದಿಗಳನ್ನು ಓದುಗರಿಗೆ ತಿಳಿಸಿಕೊಡಲು ಪ್ರಯತ್ನಿಸಲಾಗುವದು. ಬ್ರಹ್ಮಾಂಡ ಪುರಾಣ - ಬ್ರಹ್ಮವೈವರ್ತಾಪುರಾಣ, ಸ್ಕಂದ ಪುರಾಣ ಮುಂತಾದ ಹಲವಾರು ಪುರಾಣ

ಗ್ರಂಥಗಳನ್ನು ಓದಿ ತಿಳಿದುಕೊಳ್ಳಬಹುದು ಮತ್ತು ಸಾಲಿಗ್ರಾಮದ ಅಗಾಧ ಮಹಿಮೆಯನ್ನೂ ತಿಳಿದುಕೊಳ್ಳಬಹುದು. ದೇವರ ಪ್ರತೀಕಗಳಲ್ಲಿ ಸಾಲಿಗ್ರಾಮಕ್ಕೆ ಮಾತ್ರ ಯಾಕೆ ಇಷ್ಟು ಮಹತ್ವ ಎಂಬ ಬಗ್ಗೆ ಶ್ರೀ ಶಂಕರಾಚಾರ್ಯರು ತಮ್ಮ ವೇದಾಂತ ಸೂತ್ರ ಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ.

ಬಾಹ್ಯ ರೂಪದಿಂದ ಈ ಪವಿತ್ರ ಶಿಲೆಯನ್ನು ನೋಡಿದ ಕೂಡಲೇ ಸಾಮಾನ್ಯ ವ್ಯಕ್ತಿಯು ಇದು ಸಾಲಿಗ್ರಾಮ ಶಿಲೆ ಎಂದು ಸಹಜವಾಗಿ ಹೇಳುತ್ತಾನೆ. ಅವುಗಳಲ್ಲಿ ಇರುವ ಚಕ್ರಗಳ ಸಂಖ್ಯೆ, ಚಕ್ರಗಳು ಇರುವ ಸ್ಥಳ, ಆಕಾರ, ಬಣ್ಣ, ಗಾತ್ರ, ಚೆನ್ನದ ಗೆರೆಗಳು, ಬಿರುಕುಗಳು ಇತ್ಯಾದಿಗಳ ಆಧಾರದಿಂದ ಇದು ಎಂತಹ ಸಾಲಿಗ್ರಾಮ ಪೂಜೆಯ ಪದ್ಧತಿ, ಫಲಪ್ರಾಪ್ತಿ ಬಲ್ಲವರಿಂದ ತಿಳಿಯಬಹುದು. ಮಾನವ ನಿರ್ಮಿತ ವಿಗ್ರಹ ಪೂಜೆಗಿಂತಲೂ ಸಾಲಿಗ್ರಾಮ ಪೂಜೆಯು ಬಹಳ ಸರಳವು. ನಿತ್ಯ ಭಗವಂತನೇ ಇದರಲ್ಲಿ ವಾಸವಾಗಿರುವನೆಂದಮೇಲೆ ಆವಾಹನ – ವಿಸರ್ಜನೆಗೆ ಅವಕಾಶವೇ ಇಲ್ಲ. ಪೂಜಿಸಲು ವಿಶೇಷವಾದ ಉಪದೇಶ ಪೂಜಾವಿಧಿ ಪುರೋಹಿತರ ಅವಶ್ಯಕತೆ ಯಾವದೂ ಬೇಕಾಗಿಲ್ಲ. ಯಾವ ರೀತಿಯಿಂದ ಪೂಜಿಸಿದರೂ ತಪ್ಪು ಇಲ್ಲ. ಹೀಗೆಂದ ಮಾತ್ರಕ್ಕೆ ಪೂಜಾ ಪದ್ಧತಿಯ

ದುರ್ಬಳಿಕೆಯನ್ನು ಮಾಡಲೇಬಾರದು. ಅಕಸ್ಮಾತ್ತಾಗಿ ಕೈಜಾರಿ ಬಿದ್ದರೆ ತುಂಡಾದರೆ ಊನವಾಯಿತೆಂದು ಅಸಮಾಧಾನಪಡಲೂ ಬಾರದು. ಅದನ್ನು ಬೆಳ್ಳಿಯ ತಂತಿಯಿಂದ ಸುತ್ತಿಸಿ ಪೂಜಿಸಬಹುದು. ಮತ್ತೊಬ್ಬರಿಗೆ ಕೊಡಬಾರದು, ಬೀಸಾಕಬಾರದು, ಕ್ರಯಕ್ಕೆ ಮಾರಬಾರದು. ಪ್ರಸಂಗದಲ್ಲಿ ಅಡಿಗೆಯ ನೈವೇದ್ಯವಾಗಿಲ್ಲವೆಂದು ಮರುಗಬಾರದು, ಹಣ್ಣುಹಂಪಲು, ಸಕ್ಕರೆ, ನೈವೇದ್ಯ ಮಾಡಿದಲ್ಲಿ ಅಡಿಗೆಯ ನೈವೇದ್ಯ ಮಾಡಿದಷ್ಟೇ ಪುಣ್ಯ ಬರುವದು. ತಾಮ್ರದ ಸಂಪುಷ್ಠ ಸಣ್ಣಸಣ್ಣ ಭರಣಿ, ಬೆತ್ತದ ಪೆಟ್ಟಿಗೆ, ತಾಡವೋಲೆ ಮುಂತಾದವುಗಳಲ್ಲಿ ಭದ್ರವಾಗಿ ಹಾಕಿಕೊಂಡು ಪರಸ್ಥಳಕ್ಕೆ ಒಯ್ಯಬಹುದು. ಸಾಲಿಗ್ರಾಮವನ್ನು ಯಾವ ರೀತಿಯಲ್ಲಿ ಪೂಜಿಸಿದರೂ ಸರಿ ಆದರೆ ಅದರ ಅಡಿಯಲ್ಲಿ ಮತ್ತು ಮೇಲೆ ತುಳಸೀದಳವನ್ನಿಟ್ಟು ಅಭಿಷೇಕ ಮಾಡಿದಾಗಲೇ ಅದು ತೀರ್ಥವಾಗುತ್ತದೆ. ಕನಿಷ್ಠಪಕ್ಷ ಮಂತ್ರ ಬರದಿದ್ದರೂ "ಓಂ ನಮೋ ಭಗವತೇ ವಾಸುದೇವಾಯ" ಇಷ್ಟನ್ನು ಅಂದು ಅಭಿಷೇಕ ಮಾಡಿ ಗಂಧ, ತುಳಸೀದಳ ಇಟ್ಟರೆ ಪೂಜೆ ಮಾಡಿದಂತೆಯೇ ಸರಿ.

ಮನೆಯಲ್ಲಿ ಒಂದು ಸಾಲಿಗ್ರಾಮ ಅಥವಾ ಎರಡು ಸಾಲಿಗ್ರಾಮ ಇದ್ದರೆ

ಪೂಜಿಸಬಹುದು. ಮೂರು ಇದ್ದಲ್ಲಿ ಸಮ ಸಂಖ್ಯೆಯ ಸಾಲಿಗ್ರಾಮಕ್ಕೆ ಪೂಜಿಸಿರಿ.

ಸಾಲಿಗ್ರಾಮ ಚಿಕ್ಕದಾದಷ್ಟು ಫಲ ಹೆಚ್ಚು

ಸ್ತ್ರೀಯರೂ ಅವಶ್ಯ ಪೂಜಿಸಬಹುದು– ಸಾಲಿಗ್ರಾಮದ ಪೂಜಾ ವಿಷಯದಲ್ಲಿ ಕೆಲವು ತಪ್ಪು ಅಭಿಪ್ರಾಯಗಳು ಬೆಳೆದು ಬಂದಿವೆ. ಸಾಲಿಗ್ರಾಮವನ್ನು ಬ್ರಾಹ್ಮಣರು ಮಾತ್ರ ಪೂಜಿಸಬೇಕು. ಉಳಿದವರು ಪೂಜಿಸಬಾರದು. ಸ್ತ್ರೀಯರು ಸ್ಪರ್ಶಿಸಬಾರದು. ವಿಧಿ ಪ್ರಕಾರವೇ ಪೂಜಿಸಬೇಕು ಎಂಬ ಕೆಲವು ವಿಷಯಗಳಲ್ಲಿ ಕಟ್ಟಾ ಸನಾತನವಾದಿಗಳು ಶುದ್ಧ ಸುಳ್ಳು ಹೇಳಿ ತಪ್ಪು ಕಲ್ಪನೆ ತುಂಬಿದ್ದಾರೆ. ಈ ಬಗ್ಗೆ ಯಾವ ಗ್ರಂಥದಲ್ಲಿಯೂ ಯಾವ ಶಾಸ್ತ್ರದಲ್ಲಿಯೂ ಎಲ್ಲಿಯೂ ಉಲ್ಲೇಖನವಿಲ್ಲ. ಸ್ತ್ರೀಯರು ಧಾರಾಳವಾಗಿ ಪೂಜಿಸಬಹುದು.

ಬ್ರಾಹ್ಮಣರಿಗೆ :– ವಾಸುದೇವ ಸಾಲಿಗ್ರಾಮ ಶ್ರೇಷ್ಠ. ಅದರ ನಂತರ ಲಕ್ಷ್ಮೀನಾರಾಯಣ, ಅನಂತ, ಹಿರಣ್ಯಗರ್ಭ, ಪುರುಷೋತ್ತಮ ಸಾಲಿಗ್ರಾಮಗಳು ಪೂಜಿಸಬಹುದು. ಇವು ಜ್ಞಾನಶಕ್ತಿ, ಭಕ್ತಿ, ಐಶ್ವರ್ಯ, ತೇಜಸ್ಸು, ಆಯುರಾರೋಗ್ಯ ಇತ್ಯಾದಿ ಫಲ ಕೊಡುತ್ತವೆ.

ಕ್ಷತ್ರಿಯರಿಗೆ :– ಸಂಕರ್ಷಣ ಸಾಲಿಗ್ರಾಮವು ಶ್ರೇಷ್ಠ. ಅದರ ನಂತರ ಅನಂತ, ಕೃಷ್ಣ,

ಅನಿರುದ್ಧ, ಗರುಡಧ್ವಜ.

ವೈಶ್ಯರಿಗೆ :– ಪ್ರದ್ಯುಮ್ನ ಸಾಲಿಗ್ರಾಮವು ಶ್ರೇಷ್ಠವು. ಅದರ ನಂತರ ವಾಸುದೇವ, ದಾಮೋದರ. ಗದಾಧರ.

ಶೂದ್ರರಿಗೆ :– ಅನಿರುದ್ಧ ಸಾಲಿಗ್ರಾಮವು ಶ್ರೇಷ್ಠವು. ನಂತರ ಮಾಧವ, ಅಚ್ಯುತ, ಪೀತಾಂಬರ.

ವಿಷ್ಣು ಪ್ರತೀಕವಾದ ಸಾಲಿಗ್ರಾಮವು ಕೇವಲ ಇಂತಹ ವರ್ಗದವರಿಗೇ ಅರ್ಚಿಸಬೇಕೆಂದು ನಿರ್ಮಿತವಾಗಿಲ್ಲ. ಎಲ್ಲರೂ ಪೂಜಿಸಬಹುದು. ಕೆಲವು ದಶಕಗಳಿಂದ ಐರೋಪ್ಯ ರಾಷ್ಟ್ರದ ಪ್ರವಾಸಿಕರು ಕಾಠ್ಮಂಡುವಿಗೆ ಸಂದರ್ಶನ ಕೊಟ್ಟಾಗ ಅಲ್ಲಿ ಸಿಗುವ ಸಾಲಿಗ್ರಾಮಗಳ ಪ್ರಭಾವದಿಂದ ಪುಲಕಿತರಾಗಿ ತಮ್ಮ ನಾಡಿಗೆ ಒಯ್ದು ತಮ್ಮ ಪೂಜಾ ಪದ್ಧತಿಯಂತೆ ಆರಾಧಿಸುತ್ತಿದ್ದಾರೆ.

"ವರ್ಣರೂಪಾದ್ಯವಯವಪ್ರಮಾಣ ಬಲ ಲಾಂಛನೈ |
ದ್ವಾರದೇಶವಿಭಾಗೈಶ್ಚ ಭೇದಃ ಕೇಷಾಂಚಿದುಚ್ಯತೇ ||"

ಸಾಲಿಗ್ರಾಮ ಶಿಲೆಯ ಗುಣಲಕ್ಷಣಗಳು ವಿಧದವು ಅದೆ. ಸಾಲಿಗ್ರಾಮ ಶಿಲೆಗಳ

ಕೆಲವೊಂದು ಗುರುತಗಳಿಂದ ಶಂಖ, ಚಕ್ರ, ಗದಾ, ಪದ್ಮ, ಕೊಳಲು, ವತ್ಸಮಣಿ, ಕೌಸ್ತುಭ, ವನಮಾಲಾ ೧೫-೨೦ ಚಿನ್ಹೆಗಳು ವಿಷ್ಣುವಿನ ಪ್ರತೀಕವು.

ವಾಮನ ಶಿಲೆ, ಅಚ್ಯುತ ಶಿಲೆ, ಹಯಗ್ರೀವ ಶಿಲೆ, ವರಾಹ ಶಿಲೆ, ಶ್ರೀಧರ ಶಿಲೆ ಈ ರೀತಿ ಶಿಲೆಯ ವಿಭಾಗ ನೀಲಿಬಣ್ಣ, ಕಪ್ಪು ಬಣ್ಣ, ಹಳದಿ, ಕಂದು ಬಣ್ಣಗಳಲ್ಲಿಯೂ, ಬಿಳಿ, ಕೆಂಪು, ವಿವಿಧ ಬಣ್ಣಗಳಲ್ಲಿಯೂ, ಗಾತ್ರದಲ್ಲಿ ಮುಖವದನ ರಂಧ್ರಗಳಿಂದಲೂ, ಅಂಡಾಕಾರ, ತ್ರಿಕೋಣಾಕಾರ, ದುಂಡಗೆ ಹೀಗೆ ವಿಭಿನ್ನ ಆಸನದಲ್ಲಿಯೂ, ಸಾಲಿಗ್ರಾಮವು ನೀರಿನಲ್ಲಿ ಆದದ್ದೋ, ಪರ್ವತದಲ್ಲಿಯದೋ, ಸಮುದ್ರದ ಚಿಪ್ಪಿನಲ್ಲಿ ನಿರ್ಮಿತವಾದದ್ದೋ ಹೀಗೆ ಹುಟ್ಟಿನ ವಿಚಾರ, ಗಾತ್ರದಲ್ಲಿ ಸಣ್ಣದು, ದೊಡ್ಡದು, ಮಧ್ಯಮ ಹಾಗೂ ಫಲಕೊಡುವ ವಿಚಾರ ಹೀಗೆ ಮುದ್ರೆ, ಕ್ಷೇತ್ರ, ಪರಿಮಾಣ, ಆಸನ ಮೂರ್ತಿ ಭೇದ ಇತ್ಯಾದಿ ವಿಧವವುಗಳಿಂದ ಸಾಲಿಗ್ರಾಮದ ಪಾವಿತ್ರ್ಯ ಹಾಗೂ ಉಪಯುಕ್ತತೆ ತಿಳಿಯಬಹುದು.

ಕೆಲವೊಂದು ಸಾಲಿಗ್ರಾಮಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸೋಣ. ೧) ವಿಷ್ಣು ಸಾಲಿಗ್ರಾಮ ೨) ನರಸಿಂಹ ಸಾಲಿಗ್ರಾಮ ೩) ಮತ್ಸ್ಯ ಸಾಲಿಗ್ರಾಮ ೪) ಜ್ವಾಲಾನರಸಿಂಹ

ಸಾಲಿಗ್ರಾಮ ೫) ರತ್ನಗರ್ಭ ಸಾಲಿಗ್ರಾಮ ೬) ಲಾಜಾವರ್ತ ಸಾಲಿಗ್ರಾಮ ೭) ಹಿರಣ್ಯಗರ್ಭ ಸಾಲಿಗ್ರಾಮ ೮) ದಕ್ಷಿಣಾಮೂರ್ತಿ ಸಾಲಿಗ್ರಾಮ ೯) ವಾಸುದೇವ ಸಾಲಿಗ್ರಾಮ ೧೦) ಶೇಷ ಸಾಲಿಗ್ರಾಮ ೧೧) ಮಯೂರ ಸುದರ್ಶನ ಸಾಲಿಗ್ರಾಮ ೧೨) ಸಂಕರ್ಷಣ ಸಾಲಿಗ್ರಾಮ ೧೩) ಲಕ್ಷ್ಮೀ ಹಯಗ್ರೀವ ಸಾಲಿಗ್ರಾಮ ೧೪) ಲಕ್ಷ್ಮೀ ಜನಾರ್ಧನ ಸಾಲಿಗ್ರಾಮ ೧೫) ಮಹಾನೀಲ ಸಾಲಿಗ್ರಾಮ ಇತ್ಯಾದಿ ಹೀಗೆ ಪರಮಾತ್ಮನ ನೂರೆಂಟು ಹೆಸರುಗಳ ಸಾಲಿಗ್ರಾಮಗಳಿವೆ.

ಶ್ರೀಕೃಷ್ಣಂ ಗೋಪಿಕಾನಾಥಂ ಪ್ರಣಮ್ಯಜಗತಾಂ ಗುರುಮ್ ।
ಗ್ರಂಥಾನ್ ಬಹೂನ್ ಸಮಾಲೋಕ್ಯ ಸಾರಂ ಸಂಗೃಹ್ಯ ಯತ್ನತಃ ॥
ಗರುತ್ಮತೇ ವಿಷ್ಣುನೋಕ್ತಂ ಬ್ರಹ್ಮಣಾ ನಾರದಾಯಚ ।
ಸಾಲಿಗ್ರಾಮ ಶಿಲಾನಾಂ ತು ಗ್ರಾಹ್ಯಾಗ್ರಾಹ್ಯಫಲಂ ತಥಾ ॥
*ದ್ವಾರಂ ಚಕ್ರಂ ತಥಾ ಕ್ಷೇತ್ರಂ ವಕ್ಷ್ಯೇ*ಹಂ ಸಾಧುಸಮ್ಮತಂ ॥*

ನಾರದರು ಬ್ರಹ್ಮನನ್ನು ಉದ್ದೇಶಿಸಿ ಸಾಲಿಗ್ರಾಮಗಳ ಬಗ್ಗೆ ಉತ್ಪತ್ತಿ ಗುಣಲಕ್ಷಣಗಳು-

ವರ್ಣ ಕ್ಷೇತ್ರ ವಿಷ್ಣುವಿನ ಯಾವ ಅವತಾರಕ್ಕೆ ಸಂಬಂಧ ಅರ್ಥಾತ್ ಯಾವ ಮೂರ್ತಿ ಲಕ್ಷಣ ಪೂಜೆಯ ಉಪಯುಕ್ತ ಅಂದರೆ ಫಲ ಹೇಳ ತೊಡಗಿದರು.

ಶ್ರೀಕ್ಷೇತ್ರಂ ತು ವಾಸುದೇವಸ್ಯ ಶ್ವೇತವರ್ಣಂ ಪ್ರಚಕ್ಷತೇ ।

ಶ್ರೀಮನ್ನಾರಾಯಣಕ್ಷೇತ್ರಂ ಹರಿದ್ರಾಭಾಂಗ ಗೌರವಮ್ ॥

ಬಿಳಿಯ ಬಣ್ಣದ ಸಾಲಿಗ್ರಾಮವು ವಾಸುದೇವ ಕ್ಷೇತ್ರ ಅರಿಷಿಣದಂತೆ ಹಳದಿ ಬಣ್ಣದಿಂದ ಕೂಡಿದ ಸಾಲಿಗ್ರಾಮವು ಶ್ರೀಮನ್ ನಾರಾಯಣ ಕ್ಷೇತ್ರವು.

ಹೈಮಂ ಹಿರಣ್ಯಗರ್ಭಂ ಸ್ಯಾತ್ ಶ್ರೀಧರಂ ಪೀತಮುಚ್ಯತೇ ।

ಶ್ಯಾಮಂ ನಾರಾಯಣಂ ಜ್ಞೇಯಂ ಕೃಷ್ಣಂ ವಿಷ್ಣುಂ ತಥೈವ ಚ ॥

ಚಿನ್ನ ಬಣ್ಣದಿಂದ ಕೂಡಿದ್ದರೆ ಹಿರಣ್ಯಗರ್ಭ ಕ್ಷೇತ್ರವು ಸಾಮಾನ್ಯ ಹಳದಿ ಬಣ್ಣದಿಂದ ಕೂಡಿದ್ದರೆ 'ಶ್ರೀಧರ ಕ್ಷೇತ್ರವು' ಕಪ್ಪು ಬಣ್ಣದಿಂದ ಕೂಡಿದ್ದರೆ ಶ್ರೀಕೃಷ್ಣ ಕ್ಷೇತ್ರ ಅಥವಾ ವಿಷ್ಣು ಕ್ಷೇತ್ರವು

ದಾಮೋದರಂತು ನೀಲಾಭಂ ಅನಿರುದ್ಧಂ ತಥೈವ ಚ ।

ಮಧ್ವಾಭಂ ಮಾಧವಂ ಜ್ಞೇಯಂ ರಕ್ತಂ ಸಂಕರ್ಷಣಂ ತಥಾ ॥

ನೀಲಿಬಣ್ಣದಿಂದಿದ್ದರೆ ಅದು ದಾಮೋದರ ಕ್ಷೇತ್ರವು ಅಥವಾ ಅನಿರುದ್ಧ ಕ್ಷೇತ್ರವು. ಜೇನುತುಪ್ಪದ ಬಣ್ಣದಂತಿದ್ದರೆ ಅದು ಮಾಧವ ಕ್ಷೇತ್ರವು, ಕೆಂಬಣ್ಣದಿಂದಿದ್ದರೆ ಅದು ಸಂಕರ್ಷಣ ಕ್ಷೇತ್ರವು.

ವರ್ಣತಃ ಕಪಿಲಂ ಸರ್ವಂ ನಾರಸಿಂಹಂ ಪ್ರಚಕ್ಷತೇ ।

ಬಹುವರ್ಣಮನಂತಂ ಸ್ಯಾತ್ ರಾಮಂ ರುಕ್ಮಾಖ್ಯ ಸನ್ನಿಭಮ್ ॥

ಕಪಿಲ ವರ್ಣದಾಗಿದ್ದರೆ ಅದು ನರಸಿಂಹ ಕ್ಷೇತ್ರವು. ಅನೇಕ ಬಣ್ಣಗಳಿಂದ ಕೂಡಿದ್ದಾಗಿದ್ದರೆ ಅನಂತ ಕ್ಷೇತ್ರವು, ಚಿನ್ನದ ಬಣ್ಣದಾಗಿದ್ದರೆ ರಾಮಕ್ಷೇತ್ರವು. ಈ ಶಿಲೆಗಳಿಗೆ ಅವುಗಳದ್ದೇ ಆದ ಪ್ರಭಾವ ಹಾಗೂ ಪರಿಣಾಮಗಳಿವೆ.

ಶ್ವೇತಂ ಮೋಕ್ಷಪ್ರದಂ ಚೈವ = ಬಿಳಿಬಣ್ಣದ್ದು ಮೋಕ್ಷವನ್ನೂ

ನೀಲಂ ಲಕ್ಷ್ಮೀಪ್ರದಾಯಕಮ್ = ನೀಲಿ ಬಣ್ಣದ್ದು ಸಂಪತ್ತನ್ನೂ

"ಪುಷ್ಟಿದಂ ವೃದ್ಧಿದಂ ಶ್ಯಾಮಂಕೃಷ್ಣಂ ಕೀರ್ತಿಪ್ರದಂಸದಾ ॥"

ಮೋಡದಂತೆ ಕಪ್ಪಾಗಿದ್ದದ್ದು ಕೀರ್ತಿಯನ್ನೂ, ಅರಿಷಿಣ ಬಣ್ಣದ್ದು ಧನಪ್ರಾಪ್ತಿಯನ್ನೂ,

ಕೆಂಪು ಮಿಶ್ರಿತ ಬಿಳಿಬಣ್ಣದ್ದು ಶ್ರೇಯಸ್ಸನ್ನೂ, ಕೆಂಪು ಬಣ್ಣದ್ದು ರಾಜ್ಯ ಪ್ರಾಪ್ತಿಯನ್ನೂ ಕೊಡುವದು.

"ಗೌರವರ್ಣಂ ಧನಕರಂ ಹೇಮ ವರ್ಣಂ ತಥೈವಚ ।
ಪಾಂಡುರಂ ಕೀರ್ತಿದಂ ವಿದ್ಯಾದ್ರಕ್ತಂ ರಾಜ್ಯಪ್ರದಾಯಕಮ್ ॥"

ಹೀಗಿರುವಾಗ ನಿಮಗೆ ಯಾವ ಯಾವ ಫಲ ಬೇಕೋ ಅಂತಹ ಬಣ್ಣದ ಸಾಲಿಗ್ರಾಮ ಪೂಜಾ ಮಾಡಬೇಕು.

ಸಾಲಿಗ್ರಾಮ :	ನುಣುಪಾಗಿರುವದು	– ಸಿದ್ಧಿಯನ್ನು
	ಚಿಕ್ಕದಾದದ್ದು	– ಶ್ರೇಷ್ಠ ಫಲವನ್ನು
	ತಂಪಾದದ್ದು	– ಸಂತೋಷವನ್ನು
	ದುಂಡಗೆ ಕಪ್ಪಾಗಿದ್ದದ್ದು	– ಯಶಸ್ಸನ್ನು
	ಮೋಡದಂತೆ ಕಪ್ಪಾಗಿದ್ದದ್ದು	– ಕೀರ್ತಿಯನ್ನು
	ಬಿಳಿಯ ಬಣ್ಣದ್ದು	– ಮೋಕ್ಷವನ್ನು

ಅರಿಷಿಣ ಬಣ್ಣದ್ದು – ಧನಪ್ರಾಪ್ತಿ-ಸುಖವನ್ನು

ಕೆಂಪು ಬಣ್ಣದ್ದು – ರಾಜ್ಯವನ್ನು, ಕೀರ್ತಿಯನ್ನು

ಅನರ್ಹ ಸಾಲಿಗ್ರಾಮ :

ಕಡುಬಣ್ಣದ ಸಾಲಿಗ್ರಾಮ – ದುಃಖವನ್ನು

ಮಸುಕಾದ ಬಣ್ಣದ್ದು – ಕುಲ ನಾಶವನ್ನು

ಸಂದಿಗ್ಧ ವರ್ಣದ ಸಾಲಿಗ್ರಾಮ – ಭೂ-ಸಂಪತ್ತು ಹಾನಿಯನ್ನು ಹಾಗೂ ಮರಣವನ್ನು

ಕಪಿಲ ವರ್ಣದ ಸಾಲಿಗ್ರಾಮ – (ಹಳದಿ ಮಿಶ್ರಿತ ಕಂದು) ಪತ್ನಿ-ಪುತ್ರರ ನಾಶವನ್ನು ಉಂಟು ಮಾಡುವದು.

ಹೀಗೆ ಸಾವಿರಾರು ತರಹದ ಬಣ್ಣ, ಗಾತ್ರ, ತೂಕ, ವದನ, ಚಕ್ರ ಫಲ ಕೊಡುವ ಇತ್ಯಾದಿ ಸಾಲಿಗ್ರಾಮಗಳಲ್ಲಿ ಅರ್ಹ ಯಾವದು ಅನರ್ಹ ಯಾವದು ಎಂಬುದನ್ನು ಪರೀಕ್ಷಿಸಿ ಪೂಜಿಸಬೇಕು.

ಲಕ್ಷ್ಮೀದೇವಿಯೊಡನೆ ಶ್ರೀಹರಿಯು ಸನ್ನಿಧಾನವನ್ನಿಟ್ಟಿರುವ ಹೆಚ್ಚು ಫಲವನ್ನೂ, ಸುಖಸಂಪತ್ತನ್ನೂ, ಆಯುರಾರೋಗ್ಯವನ್ನೂ ವಂಶಾಭಿವೃದ್ಧಿಯನ್ನೂ, ಕೀರ್ತಿಯನ್ನೂ ತಂದು ಕೊಡುವಂತಹ ಚಿಕ್ಕದಾದ ಸಾಲಿಗ್ರಾಮವನ್ನು ಗೃಹಸ್ಥರಿಗೆ ಪೂಜಿಸಲು ಯೋಗ್ಯವು.

ಪರಮಾತ್ಮನ ದಶಾವತಾರದ ಮೂರ್ತಿಗಳ ಲಕ್ಷಣಗಳು

ದಶಾವತಾರಗಳು- ೧) ಮತ್ಸ್ಯ ೨) ಕೂರ್ಮ ೩) ವರಾಹ ೪) ನೃಸಿಂಹ ೫) ವಾಮನ ೬) ಪರಶುರಾಮ ೭) ರಾಮ ೮) ಕೃಷ್ಣ ೯) ಬುದ್ಧ ೧೦) ಕಲ್ಕಿ ಹೀಗೆ ಸಾಲಿಗ್ರಾಮ ಶಿಲೆಯಲ್ಲಿ ಹತ್ತು ಭೇದಗಳು. ಅವುಗಳ ಲಕ್ಷಣಗಳು – ಫಲಗಳು.

೧) ಮತ್ಸ್ಯ :- ಮೀನಾಕಾರ ಶಿಲೆ ನುಣುಪು ಕಂಚಿನ ಬಣ್ಣ ಎರಡು ಚಕ್ರ, ಪೃಷ್ಠ ಭಾಗದಲ್ಲಿ ತೂತು, ಎಡಭಾಗದಲ್ಲಿ ಒಂದು ರೇಖೆ ಪೂಜಿಸಿದವನಿಗೆ ಫಲಪ್ರದ ಶುಭಕರವು. ಇದರಲ್ಲಿ ಚಿತ್ರವರ್ಣ ಮತ್ಸ್ಯ ೨) ಶಕ್ತಿಮತ್ಸ್ಯ ೩) ಶ್ರೀವತ್ಸಮತ್ಸ್ಯ ೪) ಕಾಂಸ್ಯ ವರ್ಣಮತ್ಸ್ಯ ೫) ಸುಶಿರಾಂಕಿತಮತ್ಸ್ಯ ಹೀಗೆ ಐದು ರೀತಿಯವು ಅವೆ.

೨) ಕೂರ್ಮ :- ಬೆನ್ನು ಎತ್ತರ, ಬಿಳಿಯಬಣ್ಣ ಎಡಬಲಕ್ಕೆ ಉದ್ದವಾದ ಮುಖ,

ಚಿನ್ನದ ಕಾಂತಿ, ಉರುಟಾದ ಚಕ್ರ, ಮುಖದಲ್ಲಿ ಎಡರು ಚಕ್ರ, ಎರಡು ಪಾರ್ಶ್ವಗಳಲ್ಲಿ ಆಮೆಯ ಆಕಾರ ಸ್ಥಿರವಾದ ಆಸನ, ಚಿಕ್ಕದಾದ ರಂಧ್ರ, ಇದರಲ್ಲಿ ಮನೋರಥ ಕೂರ್ಮ. ೨) ಕಾಮಕೂರ್ಮ ೩) ಸರ್ವ ಕಾಮಕೂರ್ಮ ೪) ಪುತ್ರ ಪೌತ್ರಾಭಿವೃದ್ಧಿ ಕೂರ್ಮ ೫) ಮಲಾಕೂರ್ಮ ೬) ಅಚಕ್ರ ಕೂರ್ಮ ೭) ಕಾಮಟಾಕಾರ ಕೂರ್ಮ ೮) ಚಿತ್ರವರ್ಣ ಕೂರ್ಮ ೯) ಅಂಡದ್ವಯ ಕೂರ್ಮ ೧೦) ವರಾಹ ಕೂರ್ಮ. ಹೀಗೆ ಹತ್ತು ವಿಧಗಳು. ಪೂಜೆಯಿಂದ ಶುಭಪ್ರದ, ಸರ್ವಾಭಿಷ್ಟ ಫಲ, ಪುತ್ರ ಪೌತ್ರಾದಿ ಫಲ, ಅತ್ಯುನ್ನತ ಶ್ರೇಣಿಯ ಗೌರವ, ಅಂಟಿಕೊಂಡ ಪೀಡೆಯ ಪರಿಹಾರವಾಗುವದು. ಕೂರ್ಮ ಮೂರ್ತಿಯ ಸಾಲಿಗ್ರಾಮ ಸಿಗುವದು ಬಲು ಅಪರೂಪವು.

೩) **ವರಾಹ ಲಕ್ಷಣ :–** ವರಾಹಮೂರ್ತಿ ರಿತ್ಯುಕ್ತಂ ರಾಜ್ಯ ಲಕ್ಷ್ಮೀಪ್ರದಂ ನೃಣಾಮ್ ॥ ಎಂದು ಹೇಳಿದಂತೆ ವರಾಹಮೂರ್ತಿ ಸಾಲಿಗ್ರಾಮವು ಯಾರ ಮನೆಯಲ್ಲಿ ಪೂಜಿಸಲ್ಪಡುತ್ತಿರುತ್ತದೆಯೋ ಅಂಥವರಿಗೆ ರಾಜ್ಯ ಸಂಪತ್ತು ಪ್ರಾಪ್ತವಾಗುತ್ತದೆ. ಕೆನ್ನೈದಿಲೆಯ ಬಣ್ಣದ್ದು, ಉದ್ದವಾದ ಆಕಾರ, ಉದ್ದವಾದ ಮುಖವು, ಎತ್ತರವಾದ ಬೆನ್ನು, ವಿಷಮ

ಸಂಖ್ಯೆಯಲ್ಲಿ ಚಕ್ರಗಳು, ಅಗಲವಾದ ಆಸನ, ಅಲ್ಲಲ್ಲಿ ಆಭರಣಗಳಂತೆ ಕಾಣುವ ಗೆರೆಗಳು ಇರುತ್ತವೆ. ಭೂಸಂಪತ್ತು, ಆರೋಗ್ಯ ಸಂಪತ್ತು, ಐಶ್ವರ್ಯ ಸಂಪತ್ತು ಕೊಡುವದು. ಇದರಲ್ಲಿ ಲಕ್ಷ್ಮೀ ಸಹಿತ ವರಾಹಮೂರ್ತಿ ಸಾಲಿಗ್ರಾಮವು ಇದೆ.

೪) ನೃಸಿಂಹ ಸಾಲಿಗ್ರಾಮ ಲಕ್ಷಣ :– ತತ್ರಾದೌದ್ವಿವಿಧೋ ಲಕ್ಷ್ಮೀನೃಸಿಂಹಾಖ್ಯ ಇಹೋಚ್ಯತೇ । ವಾಮ ಪಾರ್ಶ್ವಸ್ಥಿತೇ ಚಕ್ರೇ ಕೃಷ್ಣಸ್ಸ ಬಿಂದುಕಃ ॥ ಲಕ್ಷ್ಮೀನೃಸಿಂಹೋ ವಿಖ್ಯಾತಃ ಸರ್ವ ಭಾಗ್ಯ ಪ್ರದೋ ನೃಣಾಮ್ ॥ ವಿಶಾಲವಾದ ಮುಖವು, ಕಪಿಲ ವರ್ಣ, ಎರಡು ಚಕ್ರ, ಸ್ಥಿರವಾದ ಆಸನ, ಬಾಗಿದ ಬೆನ್ನು, ಗುಲಗುಂಜಿಯಷ್ಟು ಎರಡು ತೂತು, ನಡುಭಾಗ ದೊಡ್ಡದು. ಹೀಗೆ ಇದರ ಲಕ್ಷಣಗಳಿದ್ದು ಇದರಲ್ಲಿ ಅನೇಕ ಪ್ರಕಾರಗಳಿವೆ– ೧) ಯೋಗಾನಂದ ನೃಸಿಂಹ ೨) ಬಾಲನರಸಿಂಹ ೩) ವಿದ್ಯುಜ್ಜಿಹ್ವನರಸಿಂಹ ೪) ವಿಭೀಷಣ ನರಸಿಂಹ ೫) ಅಧೋಮುಖ ನರಸಿಂಹ ೬) ಸರ್ವತೋಮುಖ ನರಸಿಂಹ ೭) ರಾಕ್ಷಸ ನರಸಿಂಹ ೮) ವಿದಾರುಣ ನರಸಿಂಹ ೯) ಕುಕ್ಷಿ ನರಸಿಂಹ ೧೦) ಭಿತ್ತಿ ನರಸಿಂಹ ೧೧) ವಿಜಯನರಸಿಂಹ ೧೨) ಕಪಿಲಾನರಸಿಂಹ ೧೩) ಜ್ವಾಲಾನರಸಿಂಹ ೧೪) ಮಹಾಜ್ವಾಲಾ

ನರಸಿಂಹ ೧೫) ಶುದ್ಧನರಸಿಂಹ ೧೬) ಬದ್ಧಚಕ್ರನರಸಿಂಹ ೧೭) ದಂಷ್ಟ್ರೀನರಸಿಂಹ ೧೮) ವಕ್ರದಂಷ್ಟ್ರನರಸಿಂಹ ೧೯) ಪಾತಾಳನರಸಿಂಹ ೨೦) ಚತುಶ್ಚಕ್ರ ನರಸಿಂಹ ೨೧) ಲಕ್ಷ್ಮೀನರಸಿಂಹ ೨೨) ಆಕಾಶ ನರಸಿಂಹ ಹೀಗೆ ಪ್ರಕಾರಗಳಿವೆ.

ಕುಕ್ಷಿ ನರಸಿಂಹ ಸಾಲಿಗ್ರಾಮವನ್ನು ವನವಾಸಿಗಳೂ ವಿಕಾರಮುಖ ಸಾಲಿಗ್ರಾಮವನ್ನು ಗೃಹಸ್ಥಾಶ್ರಮಿಗಳು ಪೂಜಿಸಬಾರದು. ಇದು ಅವರಿಗೆ ಭಯ ಹಾಗೂ ತೊಂದರೆದಾಯಕವು. ಯತಿಗಳಿಗೆ ಯೋಗ್ಯವಾದ ಸಾಲಿಗ್ರಾಮವು ಅದರಂತೆ ಮಹಾಬಲನರಸಿಂಹ ಅಧೋಮುಖ ನರಸಿಂಹ ಇವೂ ಯತಿಗಳಿಂದ ಪೂಜೆಗೆ ಯೋಗ್ಯವು. ಬ್ರಹ್ಮಚರ್ಯ ವ್ರತವಿಲ್ಲದವನು ಅಥವಾ ಬ್ರಹ್ಮಚಾರಿಯು (ಲಗ್ನ ಆಗದೇ ಇದ್ದವನು) ಲಕ್ಷ್ಮೀನರಸಿಂಹ ಸಾಲಿಗ್ರಾಮವನ್ನು ಪೂಜಿಸಬಾರದು. ಪೂಜಿಸಿದಲ್ಲಿ ರೋಗಬಾಧೆ, ಮನೆ ನಾಶಕ್ಕೆ ಕಾರಣವು. ಇದು ತೀಕ್ಷ್ಣ ಹಾಗೂ ಉಗ್ರ ಸಾಲಿಗ್ರಾಮವು.

೫) ವಾಮನ ಸಾಲಿಗ್ರಾಮ ಲಕ್ಷಣ :- ಅತಸೀ ಪುಷ್ಪ ಸಂಕಾಶೋ ಬಿಂದುನಾ ಪರಿಭೂಷಿತಃ। ಅಸ್ಯಚಕ್ರ ದ್ವಾಯೋ ಪೇತೋ ಸರ್ವಭಾಗ್ಯ ಪ್ರದೋ ನೃಣಾಮ್॥

ಯೋವಾಮನಾಭಿದೋ ದೇವಃ ಶ್ವೇತಬಿಂದು ಯತೋ ಮುಖೇ॥ ಅತಸಿಯ ಪುಷ್ಪದ ಬಣ್ಣವಿರುವ ಬಿಂದುವಿನಿಂದ ಕೂಡಿದ ಮುಖದಲ್ಲಿ ಎರಡು ಚಕ್ರ ಬಿಳಿಯ ಬಿಂದುವಿರುವ ದುಂಡಾಗಿದ್ದು ನೀಲಬಣ್ಣ ಗಿಡ್ಡಾಗಿದ್ದು ಕಪ್ಪಾಗಿ ನುಣ್ಣಗಾಗಿ ಬೆನ್ನ ಎತ್ತರವಾಗಿ ಇರತಕ್ಕ ಸಕಲ ಭಾಗ್ಯವನ್ನೀಯುವ ಧನಧಾನ್ಯ ದನಕರುಗಳ ಭಾಗ್ಯ ಕೊಡುವ ಈ ವಾಮನ ಸಾಲಿಗ್ರಾಮಗಳಲ್ಲಿ ಹಲವಾರು ಪ್ರಕಾರಗಳಿವೆ. ೧) ದಧಿವಾಮನ ೨) ಶುದ್ಧ ವಾಮನ ೩) ಅತಸೀ ಪುಷ್ಪವಾಮನ ೪) ಹೇಮಾಂಗ ವಾಮನ ೫) ಇಂದ್ರನೀಲ ವಾಮನ ೬) ಚಿತ್ರಕುಂಡಲ ವಾಮನ ೭) ಸೂಕ್ಷ್ಮದ್ವಾರ ವಾಮನ ೮) ರಕ್ತಬಿಂದು ವಾಮನ ೯) ಸೀತೋಮುಖ ವಾಮನ ೧೦) ರಕ್ತನಿಲೋ ವಾಮನ ೧೧) ಭೂ ಲಾಭ ವಾಮನ ೧೨) ಬೃಹತ್‌ಕುಕ್ಷಿ ವಾಮನ ಹೀಗೆ ಹದಿನೈದು-ಇಪ್ಪತ್ತು ತರಹಗಳು ಇವೆ. ಇದನ್ನು ಪೂಜಿಸಿದವರಿಗೆ ಸರ್ವಾಭಿಷ್ಟ ಫಲಪ್ರಾಪ್ತಿಯು.

೬) ಪರಶುರಾಮ ಸಾಲಿಗ್ರಾಮ ಲಕ್ಷಣ :– ಭಿತ್ತಿ ಭಾಗೇ ಗತೇ ಚಕ್ರೇ ವಾಮೇವಾ ದಕ್ಷಿಣೇ ಪಿ ವಾ ಚಕ್ರ ಭಾಗೇಗತೇ ಬಿಂದುಃ ಪರಶ್ವಾಕೃತಿ ರೇವ ವಾ॥ ಪರಶುರಾಮ

ಸಾಲಿಗ್ರಾಮದಲ್ಲಿ ನಾಲ್ಕು ಪ್ರಕಾರಗಳಿವೆ. ೧) ರಾಜ ಪೂಜ್ಯ ಪರಶುರಾಮ ೨) ಶಾಂತ ಪರಶುರಾಮ ೩) ಅತಸೀ ಪುಷ್ಪ ಪರಶುರಾಮ ೪) ದೂರ್ವಾಭ ಪರಶುರಾಮ.

ಬಿಳಿಯ ಬಣ್ಣ ಕಪ್ಪುಗೊರಸಿನ ಆಕೃತಿ ಉದ್ದವಾಗಿದ್ದು ಉಬ್ಬು ಹೊಟ್ಟೆ, ಎರಡು ಚಕ್ರ, ಕೊಡಲಿಯ ಚಿಹ್ನೆ ಇರುವಂತಹ ಇದು ಮಹಾತ್ಮರಿಗೆ ಪೂಜಿಸಲು ಯೋಗ್ಯವಾಗಿದೆ. "ಶಾಂತಾಭ್ಯಃ ಶಾಂತಿದೋನೃಣಾಮ್"

೭) **ಶ್ರೀರಾಮ ಸಾಲಿಗ್ರಾಮ :-** ಇದರಲ್ಲಿ ವೀರ ರಾಮಮೂರ್ತಿ – ಸೀತಾರಾಮ ಮೂರ್ತಿ, ಹೃಷ್ಟರಾಮ ಮೂರ್ತಿ ೪) ಕೋದಂಡರಾಮ ಮೂರ್ತಿ ೫) ದಾಶರಥಿ ರಾಮಮೂರ್ತಿ ೬) ಪಟ್ಟಾಭಿರಾಮ ಮೂರ್ತಿ ೭) ವೀರರಾಮ ಮೂರ್ತಿ ೮) ದಶಕಂಠ ಕುಲಾಂತಕ ರಾಮಮೂರ್ತಿ ೯) ಏಕಚಕ್ರ ರಾಮಮೂರ್ತಿ ಹೀಗೆ ಇಪ್ಪತ್ತು-ಇಪ್ಪತ್ತೈದು ವಿಧಗಳಿವೆ. ಇವುಗಳ ಲಕ್ಷಣಗಳೆಂದರೆ ಉದ್ದವಾದ ಆಕಾರ, ಬಿಲ್ಲು ಬಾಣ, ಅಂಕುಶ, ವಿಶಾಲವಾದ ಚಕ್ರ ಬನಿಕೆಯ ಚಿನ್ಹ ಮುಂತಾದವುಗಳು ಕಂಡು ಬರುತ್ತದೆ. ಪೂಜಕರಿಗೆ ಸರ್ವಸಿದ್ಧಿ ಐಹಿಕ ಭೋಗ ಪುತ್ರ ಸಂತಾನ ಧನಧಾನ್ಯ ವೃದ್ಧಿಯಾಗುವದಲ್ಲದೆ ಕುಟುಂಬದಲ್ಲಿ

ಸದಾ ಶಾಂತಿ ವಾತಾವರಣವಿರುವದು.

೮) ಶ್ರೀಕೃಷ್ಣ ಸಾಲಿಗ್ರಾಮ :- "ಕೃಷ್ಣೋತಿ ಕೃಷ್ಣಃ ಸಂಸ್ಥೂಲೋ ನ ಕೃಶೋ ನಾತಿ ಶೋಭನಃ। ವನಮಾಲಾ ಪರಿವೃತಃ ಪೃಷ್ಠೇ ಶ್ರೀವತ್ಸಲಾಂಛನಃ॥ ಅತಿ ಕಪ್ಪುಬಣ್ಣ ದೊಡ್ಡ ಆಕಾರ ನೋಡಲು ಆಕರ್ಷಕ ಅಲ್ಲದ ವದನದ ಹತ್ತಿರ ಎರಡು ಚಕ್ರಗಳು ಕೊಳಲಿನಂತಹ ಗೆರೆಗಳು ಒರಟು ಮೈ ಹುರುಬುರ ಮೇಲ್ಭಾಗವು ಈ ರೀತಿ ಇದ್ದು, ಇದರಲ್ಲಿಯೂ ಅನೇಕ ಪ್ರಕಾರಗಳಿವೆ. ಶುದ್ಧ ಕೃಷ್ಣ – ಬಾಲಕೃಷ್ಣ ಗದಾಕಾರ ಕೃಷ್ಣ ೪) ಛತ್ರಾಕಾರ ಕೃಷ್ಣ ೫) ಶ್ಯಾಮರಕ್ತ ಕೃಷ್ಣ ೬) ಕಂಸಮರ್ದನ ಕೃಷ್ಣ ೭) ಧನಂಜಯ ಕೃಷ್ಣ ೮) ಗೋವರ್ಧನ ಕೃಷ್ಣ ಹೀಗೆ ಇಪ್ಪತ್ತಕ್ಕಿಂತ ಹೆಚ್ಚು ಅವೆ.

೯) ಬುದ್ಧಮೂರ್ತಿ :- ಇದರಲ್ಲಿ ೧) ಸರ್ವಜ್ಞ ೨) ಶ್ರೀಘನ ೩) ನಿರ್ವಾಣ ಬುದ್ಧ ೪) ಅಂತರ ವಿಶಾಲ ಎಂದು ನಾಲ್ಕೈದು ಪ್ರಕಾರಗಳಿವೆ. ರಂದ್ರೇಘು ದೃಷ್ಟ ಚಕ್ರಂ ಚಂಪಕಾಕಾರಂ ಸ ಬಿಂದುಕಮ್। ಬುದ್ಧಾಕಾರಂ ವಿಜಾನೀಯಾಚ್ಚಕ್ರಂ ವಾಮಲಿನಾವಹಮ್॥ ರಂಧ್ರದಲ್ಲಿ ಅಸ್ಪಷ್ಟವಾಗಿ ಕಾಣಿಸುವ ಚಕ್ರವು ಸಂಪಿಗೆ ಹೂವಿನ ಆಕಾರವುಳ್ಳ ಅಸ್ಪಷ್ಟವಾದ

ಚಕ್ರ ಹಾಗೂ ಬಿಂದುಗಳಿರುತ್ತವೆ.

೧೦) ಕಲ್ಕಿಮೂರ್ತಿ :- ಹಯರೇಖಾ ಸಮಾಯುಕ್ತೋ ರೇಖಾಕುಂತಾಯು ಧಾಕೃತಿ। ಶ್ವೇತವರ್ಣೋ ದೀರ್ಘಮುಖಃ ಕಲ್ಕಿರಿತ್ಯಭಿಧೀಯತೇ॥ ಇದರ ಲಕ್ಷಣವೇನೆಂದರೆ ಕುದುರೆಯ ಆಕಾರದ ರೇಖೆಗಳು ಇರುತ್ತವೆ. ದೊಡ್ಡದಾದ ಉದ್ದವಾದ ಮುಖವು ಸ್ವಲ್ಪ ಬಿಳಿಯ ಬಣ್ಣದ್ದು ಆಗಿರುತ್ತದೆ. ಇದರಲ್ಲಿಯೂ ಮಿಶ್ರ ಕಲ್ಕಿ, ಕಲ್ಯಾಣ ಕಲ್ಕೀ, ಸುವರ್ಣ ಕಲ್ಕಿ ಹೀಗೆ ನಾಲ್ಕು-ಐದು ತರಹಗಳಾಗಿವೆ.

ಪರಮಾತ್ಮನ ದಶಾವತಾರದ ಸಾಲಿಗ್ರಾಮಗಳು ಬಹಳ ಅಪರೂಪವಾಗಿ ಕಾಣಬಹುದು. ಹಳೆಯ ಕುಟುಂಬಗಳ ಮನೆಗಳಲ್ಲಿ ಸಿಗಬಹುದು. ಇತ್ತಿತ್ತಲಾಗಿ ನಕಲಿ ಸಾಲಿಗ್ರಾಮಗಳೇ ಚಾಲ್ತಿಯಲ್ಲಿವೆ. ಸಾಲಿಗ್ರಾಮವನ್ನು ಪೂಜಿಸಬೇಕೆನ್ನುವವರು ಯಾತ್ರೆಗಳಲ್ಲಿ ಹೋದಾಗ ಮೋಸ ಹೋಗದೆ ಹಣವನ್ನು ಹಾಳು ಮಾಡಿಕೊಳ್ಳದೇ ಬಲು ಜಾಗರೂಕತೆಯಿಂದ ಖರೀದಿಸಿದಲ್ಲಿ ಬಹಳ ಉತ್ತಮವು.

ಇನ್ನು ಕೇಶವಾದಿ ೧೨ ಮತ್ತು ಸಂಕರ್ಷಣಾದಿ ೧೨ ಒಟ್ಟು ೨೪ ದೇವರ ಬಗ್ಗೆ

ತಿಳಿದುಕೊಳ್ಳೋಣ.

ಸಾಲಿಗ್ರಾಮವನ್ನು ಪೂಜಿಸಿದರೆ ಐಶ್ವರ್ಯವೃದ್ಧಿ, ದಾಂಪತ್ಯ ಸುಖ, ಆರೋಗ್ಯ ಭಾಗ್ಯ, ಸಂತಾನ ಭಾಗ್ಯ, ಇಂದ್ರಿಯ ನಿಗ್ರಹ ಮುಂತಾದವುಗಳ ಫಲ ಸಿಗುವದು. ಶತ್ರು ಭಯ, ಭೂತ-ಪ್ರೇತ-ಪಿಶಾಚಾದಿಗಳ ಭಯ, ಮನೆಯಲ್ಲಿಯ ನಿತ್ಯ ಕಿರಿಕಿರಿಯಿಂದ ದೂರವಾಗಿ ಶಾಂತಿಯಿಂದ ನೆಮ್ಮದಿಯಿಂದ ಜೀವನ ಸಾಗಿಸಬಹುದು. ಕೆಲವು ಸಾಲಿಗ್ರಾಮಗಳಿಂದ ಕೆಲವರಿಗೆ ಇಚ್ಛಿತವಾದ ವೈರಾಗ್ಯ ಸನ್ಯಾಸ ಸ್ವೀಕಾರವೂ ಲಭ್ಯವಾಗುತ್ತದೆ.

ಇನ್ನು ಕೆಲವು ವಿಚಿತ್ರವಾದ ಅದ್ಭುತವಾದ ಸಾಲಿಗ್ರಾಮಗಳನ್ನು ಕಾಣಬಹುದು. ಲೋಹಚುಂಬಕಯುಕ್ತ ಸಾಲಿಗ್ರಾಮಗಳೂ, ಬಣ್ಣಬಣ್ಣಯುಕ್ತವಾದವುಗಳೂ, ತೇಲುವಂತಹ ಸಾಲಿಗ್ರಾಮಗಳೂ ಅಲ್ಲಲ್ಲಿ ಅಪರೂಪವಾಗಿ ಕಂಡುಬರುತ್ತವೆ. ಲೋಹಚುಂಬಕಯುಕ್ತ ಸಾಲಿಗ್ರಾಮಗಳಿಗೆ ತಾಮ್ರದ ಬಿಲ್ಲೆಯನ್ನು ಹಿಡಿದು ತಿರುಗಿಸಿದಾಗ ಗರಗರನೆ ತಿರುಗುತ್ತವೆ. ಕೆಲವು ಹಾಲಿನಲ್ಲಿ ಹಾಕಿದಾಗ ತೇಲುವವು. ಕೆಲವು ನೀರಿನಲ್ಲಿ ಹಾಕಿದಾಗ ಬಣ್ಣ ಬಣ್ಣದ್ದಾಗಿ ಕಾಣಿಸುವವು. ಇಂತಹ ಸಾಲಿಗ್ರಾಮಗಳ ವೈಶಿಷ್ಟ್ಯ ಕಂಡು ನಾವು ಚಕಿತರಾಗುತ್ತೇವೆ. ಎಂತಹ

ವಿಚಿತ್ರ ಸೃಷ್ಟಿ ಮಾಡಿದ್ದಾನೆ ಆ ಪರಮಾತ್ಮನು.

ಇನ್ನು ನಮ್ಮ ಮನೆಗಳಲ್ಲಿ ಅನೇಕ ವರ್ಷಗಳಿಂದ ಹಿರಿಯರು ಪೂಜಿಸುತ್ತ ಬಂದ ಲೋಹದ ಮೂರ್ತಿಗಳು ಇರುತ್ತವೆ. ಅವು ಯಾವ ದೇವರ ಮೂರ್ತಿಯು, ಸಾಲಿಗ್ರಾಮಗಳಿರುತ್ತವೆ. ಅವು ಎಂತಹ ಸಾಲಿಗ್ರಾಮಗಳು ಎಂಬುದರ ಬಗ್ಗೆ ಸ್ವಲ್ಪದರಲ್ಲಿಯೇ ತಿಳಿದುಕೊಳ್ಳುವದು ಬಹಳ ಶ್ರೇಷ್ಠವು.

೧) **ಕೇಶವ :–** ಬಲದ ಮೇಲಿನ ಕೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರ, ಎಡದ ಮೇಲಿನ ಕೈಯಲ್ಲಿ ಗದಾ, ಎಡಗೈಯಲ್ಲಿ ಪದ್ಮ ಈ ರೀತಿ ಇದ್ದರೆ ಅದು ಕೇಶವಮೂರ್ತಿ ಎಂದು ತಿಳಿಯಬೇಕು. **ಸಾಲಿಗ್ರಾಮ–** ಚಿನ್ನದ ಬಿಂದು, ಕಪ್ಪು ಬಣ್ಣ, ಚೌಕಾಕಾರ, ಸೂಕ್ಷ್ಮವಾದ ಎರಡು ಚಕ್ರ ಇದ್ದದ್ದು ಕಂಡುಬಂದರೆ ಅದು ಕೇಶವ ಸಾಲಿಗ್ರಾಮ.

೨) **ನಾರಾಯಣ :–** ಬಲದ ಮೇಲಿನ ಕೈಯಲ್ಲಿ ಪದ್ಮ, ಬಲಗೈಯಲ್ಲಿ ಗದಾ, ಎಡದ ಮೇಲಿನ ಕೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ ಈ ರೀತಿ ಇದ್ದರೆ ಅದು ನಾರಾಯಣ ಮೂರ್ತಿಯು. **ಸಾಲಿಗ್ರಾಮ–** "ಏಕವಕ್ತ್ರೇ ಚತುಶ್ಚಕ್ರೋವರ್ತುಲಃ ಶ್ಯಾಮ ವರ್ಣಕಃ ಧ್ವಜ

ವಜ್ರಾಂಕುಶೋಪೇತೋ ಮಾಲಾಯುಕ್ತಾಃ ಸಬಿಂದುಕಃ ॥" ನಾಭಿಯಲ್ಲಿ ಚಕ್ರ, ಕಪ್ಪು ಬಣ್ಣ, ಉದ್ದವಾದ ಮೂರು ಗೆರೆ, ಬಲಭಾಗದಲ್ಲಿ ರಂಧ್ರ, ಬಹಳ ಚಿಕ್ಕದೂ ಅಲ್ಲ, ದೊಡ್ಡದೂ ಅಲ್ಲ. ಅಂಕುಶಗಳ ಚಿನ್ಹ ಹೀಗಿದ್ದಲ್ಲಿ ಅದು ನಾರಾಯಣ ಸಾಲಿಗ್ರಾಮವು. ಇದರಲ್ಲಿ ಹಲವು ಪ್ರಕಾರಗಳಿವೆ. ಲಕ್ಷ್ಮೀನಾರಾಯಣ ಸಾಲಿಗ್ರಾಮ, ವೀರನಾರಾಯಣ ಸಾಲಿಗ್ರಾಮ, ಕೂರ್ಮನಾರಾಯಣ ಸಾಲಿಗ್ರಾಮ, ದ್ವಿಚಕ್ರ ಲಕ್ಷ್ಮೀನಾರಾಯಣ ಸಾಲಿಗ್ರಾಮ ಹೀಗೆ ಇಪ್ಪತ್ತೈದು-ಮೂವತ್ತು ರೀತಿಯ ಸಾಲಿಗ್ರಾಮಗಳಿವೆ.

ಖ) **ಮಾಧವ :–** "ಮಧು ವರ್ಣೋಮಧ್ಯಚಕ್ರಃ ಸ್ನಿಗ್ಧಸೂಕ್ಷ್ಮ ಮುಖಸ್ತಥಾ ಮಾಧವಶ್ಚೇತಿ ವಿಜ್ಞೇಯೋ ಯತಿನಾಂ ಮೋಕ್ಷದಾಯಕಃ ॥" ಬಲದ ಮೇಲಿನ ಕೈಯಲ್ಲಿ ಚಕ್ರ, ಬಲಗೈಯಲ್ಲಿ ಶಂಖ, ಎಡದ ಮೇಲಿನ ಕೈಯಲ್ಲಿ ಪದ್ಮ, ಎಡಗೈಯಲ್ಲಿ ಗದಾ ಹೀಗಿದ್ದರೆ ಮಾಧವಮೂರ್ತಿಯು. ಜೇನಿನ ಬಣ್ಣ, ಮಧ್ಯದಲ್ಲಿ ಚಕ್ರ, ನುಣ್ಣಾಗಿ ಸಣ್ಣದಾದ ತೂತು ಇದ್ದರೆ ಮಾಧವ ಸಾಲಿಗ್ರಾಮವು. ಇದನ್ನು ಹೆಚ್ಚಾಗಿ ಗೃಹಸ್ತರು ಪೂಜಿಸುವದಿಲ್ಲ.

ಳ) **ಗೋವಿಂದ :–** ಮೂರ್ತಿಯ ಲಕ್ಷಣ ಬಲದ ಮೇಲಿನ ಕೈಯಲ್ಲಿ ಗದಾ, ಬಲಗೈಯಲ್ಲಿ

ಪದ್ಮ, ಎಡದ ಮೇಲಿನ ಕೈಯಲ್ಲಿ ಶಂಖ, ಎಡಗೈಯಲ್ಲಿ ಚಕ್ರ ಇದು ಗೋವಿಂದ ಮೂರ್ತಿಯ ಲಕ್ಷಣವು. ಸಾಲಿಗ್ರಾಮದ ಲಕ್ಷಣವೆಂದರೆ– ಸ್ವಲ್ಪ ಕಪ್ಪುಬಣ್ಣ, ಅತಿ ದೊಡ್ಡದೂ ಅಲ್ಲ, ಅತಿ ಚಿಕ್ಕದೂ ಅಲ್ಲ. ಐದು ಅಥವಾ ಎರಡು ಚಕ್ರಗಳಿರುತ್ತವೆ.

೫) ಶ್ರೀವಿಷ್ಣು :– ಮೂರ್ತಿಯ ಲಕ್ಷಣ ಬಲದ ಮೇಲಿನ ಕೈಯಲ್ಲಿ ಪದ್ಮವಿದ್ದು, ಬಲಗೈಯಲ್ಲಿ ಶಂಖ, ಎಡದ ಮೇಲಿನ ಕೈಯಲ್ಲಿ ಚಕ್ರ, ಎಡಗೈಯಲ್ಲಿ ಗದಾ ಈ ರೀತಿ ಇದ್ದರೆ ಅದು ಶ್ರೀವಿಷ್ಣು ಮೂರ್ತಿಯು. ಸಾಲಿಗ್ರಾಮದ ಲಕ್ಷಣವೆಂದರೆ– ದೊಡ್ಡ ತೂತು, ಅರಿಷಿಣ ಮಿಶ್ರಿತ ಕೆಂಪುಬಣ್ಣ, ಅಲ್ಲಲ್ಲಿ ಗದಾ–ಪದ್ಮಗಳ ಚಿನ್ಹ, ಉರುಟಾದ ಆಕಾರವಿರುತ್ತದೆ. ಕಪಿಲಾ, ರಕ್ತಾಭ, ಕೃಷ್ಣ, ಹೇಮ, ಸಪ್ರಕಾಶ, ವಿಷ್ಣುಕ್ರಾಂತ ಹೀಗೆ ಆರು ಬಣ್ಣದವುಗಳಿವೆ.

೬) ಮಧುಸೂದನ :– ಮೂರ್ತಿಯ ಲಕ್ಷಣ ಬಲದ ಮೇಲಿನ ಕೈಯಲ್ಲಿ ಶಂಖ, ಬಲಗೈಯಲ್ಲಿ ಪದ್ಮ, ಎಡದ ಮೇಲಿನ ಕೈಯಲ್ಲಿ ಗದಾ, ಎಡಗೈಯಲ್ಲಿ ಚಕ್ರ ಹೀಗೆ ಇರುತ್ತದೆ. "ಮಧುಸೂದನ ಸ್ತಥಾ ದೇವ ಏಕಚಕ್ರೋ ಮಹಾದ್ಯುತಿ । ಸರ್ವವರ್ಣ ಸಮೋಪೇತೋ ಮಹಾಭಾಗ್ಯಪ್ರದೋ ನೃಣಾಮ್ ॥" ಒಂದು ಚಕ್ರವಿದ್ದು, ಎಲ್ಲ ಬಣ್ಣದಿಂದ ಕೂಡಿದ್ದು ಕಾಂತಿಯುಕ್ತವಾಗಿರುತ್ತದೆ.

೭) ತ್ರಿವಿಕ್ರಮ :- ಬಲದ ಮೇಲಿನ ಕೈಯಲ್ಲಿ ಗದಾ, ಬಲಗೈಯಲ್ಲಿ ಚಕ್ರ, ಎಡದ ಮೇಲಿನ ಕೈಯಲ್ಲಿ ಶಂಖ, ಎಡಗೈಯಲ್ಲಿ ಪದ್ಮ ಈ ರೀತಿ ಇದ್ದಲ್ಲಿ ತ್ರಿವಿಕ್ರಮ ಮೂರ್ತಿಯು. ತ್ರಿಕೋಣಾಕಾರ ಕಪ್ಪುಬಣ್ಣ, ಅಲ್ಲಲ್ಲಿ ಶಂಖ ಚಕ್ರಗಳಂತೆ ಕಾಣುವ ಚಿಹ್ನ ಸ್ವಲ್ಪ ನುಣುಪು ಇದ್ದರೆ ಅದು ತ್ರಿವಿಕ್ರಮ ಸಾಲಿಗ್ರಾಮವು.

೮) ವಾಮನಮೂರ್ತಿ :- ಬಲದ ಮೇಲಿನ ಕೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರ, ಎಡದ ಮೇಲಿನ ಕೈಯಲ್ಲಿ ಪದ್ಮ, ಎಡಗೈಯಲ್ಲಿ ಗದಾ ಇದ್ದ ಲಕ್ಷಣಗಳೇ ವಾಮನ ಮೂರ್ತಿಯು. ಸಾಲಿಗ್ರಾಮದ ಲಕ್ಷಣದ ಬಗ್ಗೆ ಹಿಂದೆ ಬರೆದಿದೆ.

೯) ಶ್ರೀಧರ :- ಮೂರ್ತಿಯ ಲಕ್ಷಣ ಬಲದ ಮೇಲಿನ ಕೈಯಲ್ಲಿ ಚಕ್ರವು, ಬಲಗೈಯಲ್ಲಿ ಗದಾ, ಎಡದ ಮೇಲಿನ ಕೈಯಲ್ಲಿ ಶಂಖ, ಎಡಗೈಯಲ್ಲಿ ಪದ್ಮವಿದ್ದು "ದೂರ್ವಾಶ್ಯಾಮಲ ಸಂಕಾ ಶೋ ವನಮಾಲಾ ವಿಭೂಷಿತಃ। ಆಸ್ಯತ್ರಯೇ ದ್ವಿಚಕ್ರಾಢ್ಯಃ ಶ್ರೀಧರಃ ಪರಿಕೀರ್ತಿತಃ ॥" ಎಂಬಂತೆ ನೀಲವರ್ಣ ದ್ವಾರದಲ್ಲಿ ಎರಡು ಚಕ್ರ, ಮೇಲಿನ ಮೈ ಉರುಟು, ಕಪ್ಪುಬಣ್ಣ ಹೀಗಿದ್ದಲ್ಲಿ ಅದು ಶ್ರೀಧರ ಸಾಲಿಗ್ರಾಮವು.

೧೦) **ಹೃಷಿಕೇಶ :-** ಬಲದ ಮೇಲಿನ ಕೈಯಲ್ಲಿ ಚಕ್ರವೂ, ಬಲಗೈಯಲ್ಲಿ ಪದ್ಮವೂ, ಎಡದ ಮೇಲಿನ ಕೈಯಲ್ಲಿ ಶಂಖವೂ, ಎಡಗೈಯಲ್ಲಿ ಗದಾ ಇರುತ್ತದೆ. "ಕದಂಬ ಕುಸುಮಾಕಾರೋ ರೇಖಾಪಂಚಕ ಸಂಯುತಾ। ಅರ್ಧಚಂದ್ರಾಕೃತಿರ್ದೇವಃ ಪಂಚಚಕ್ರ ಸಮನ್ವಿತಃ ॥" ಎಂಬಂತೆ ಕದಂಬ ಪುಷ್ಪದಂತೆ ಆಕಾರ ೩-೪ ರೇಖೆಗಳು ಅರ್ಧ ಚಂದ್ರಾಕೃತಿಯ ಚಕ್ರಗಳಿದ್ದದಿದ್ದೇ ಹೃಷಿಕೇಶ ಸಾಲಿಗ್ರಾಮವು. ಇದರಲ್ಲಿ ಐದು ಮುಖದ ಕೃಶವಾಗಿದ್ದು ವಿಷಮ ಸಂಖ್ಯೆಯ ಚಕ್ರಗಳಿದ್ದು ನೀಲಿ ಬಣ್ಣದವೂ ಇರುತ್ತವೆ.

೧೧) **ಪದ್ಮನಾಭ :-** ಬಲದ ಮೇಲಿನ ಕೈಯಲ್ಲಿ ಪದ್ಮ, ಬಲಗೈಯಲ್ಲಿ ಚಕ್ರ, ಎಡದ ಮೇಲಿನ ಕೈಯಲ್ಲಿ ಗದಾ, ಎಡಗೈಯಲ್ಲಿ ಶಂಖ ಇದು ಪದ್ಮನಾಭನ ಮೂರ್ತಿಯ ಲಕ್ಷಣವು. ಸಾಲಿಗ್ರಾಮದಲ್ಲಿ ಅಶತ್ರು ಪದ್ಮನಾಭ ಶುಭದಾಯಕ, ಪದ್ಮನಾಭ ನಾಭಿ ಚಕ್ರ, ಪದ್ಮನಾಭ ಶಂಖ ವರ್ಣ ಮತ್ತು ಚಾಮೀಕರ ಪದ್ಮನಾಭ ಎಂಬವೂಗಳುಂಟು.

೧೨) **ದಾಮೋದರ :-** ಮೂರ್ತಿಯ ಲಕ್ಷಣ ಬಲದ ಮೇಲಿನ ಕೈಯಲ್ಲಿ ಶಂಖ, ಬಲಗೈಯಲ್ಲಿ ಗದಾ, ಎಡದ ಮೇಲಿನ ಕೈಯಲ್ಲಿ ಚಕ್ರ, ಎಡಗೈಯಲ್ಲಿ ಪದ್ಮವು ಇರುತ್ತದೆ.

"ಸ್ಥೂಲೋದಾಮೋದರೋಜ್ಞೇಯುಂ ಸೂಕ್ಷ್ಮರಂಧ್ರೋದ್ವಿಚಕ್ರಯುಕ್ ಸಕಾಪಿಲಃ ಕೃಷ್ಣವರ್ಣೋನ್ನೃಣಾಂ ಶುಭಫಲಪ್ರದ ॥" ಸಾಲಿಗ್ರಾಮದಲ್ಲಿ ಸೂಕ್ಷ್ಮವಾದ ಒಂದೆರಡು ರಂಧ್ರ, ಚಕ್ರ, ಕಪ್ಪು ಮಿಶ್ರಿತ ಕೆಂಪು ಬಣ್ಣ, ಆಕಾರದಲ್ಲಿ ಸ್ವಲ್ಪ ದೊಡ್ಡದು ಇದ್ದರೆ ದಾಮೋದರ ಸಾಲಿಗ್ರಾಮ.

೧೩) ಸಂಕರ್ಷಣ :– ಶಂಖ ಬಲದ ಮೇಲಿನ ಕೈಯಲ್ಲಿ, ಪದ್ಮ ಬಲಗೈಯಲ್ಲಿ, ಎಡದ ಮೇಲಿನ ಕೈಯಲ್ಲಿ ಚಕ್ರ, ಗದಾ ಎಡಗೈಯಲ್ಲಿ ಇದು ಮೂರ್ತಿಯ ಲಕ್ಷಣವು. ಸಾಲಿಗ್ರಾಮದ ಲಕ್ಷಣವೆಂದರೆ ಒಂದು ಭಾಗದಲ್ಲಿ ಎರಡು ಚಕ್ರ, ಮತ್ತೊಂದು ಭಾಗದಲ್ಲಿ ಕಮಲದಂತಹ ಚಿನ್ಹ, ಕಪ್ಪು ಬಣ್ಣ ಇದರಲ್ಲಿ ರಾಜ್ಯಪೂಜ್ಯ ಪರಶುರಾಮ, ಶಾಂತ ಪರಶುರಾಮ, ಅತಸೀಪುಷ್ಪ ದೂರ್ವಾಭ ಪರಶುರಾಮ ಎಂಬ ಪ್ರಕಾರಗಳುಂಟು.

೧೪) ವಾಸುದೇವ :– ಮೂರ್ತಿಯ ಮೇಲಿನ ಬಲಕೈಯಲ್ಲಿ ಚಕ್ರವೂ, ಬಲಗೈಯಲ್ಲಿ ಗದಾ ಇದ್ದು, ಎಡದ ಮೇಲಿನ ಕೈಯಲ್ಲಿ ಶಂಖವೂ, ಎಡಗೈಯಲ್ಲಿ ಪದ್ಮವೂ ಇರುತ್ತದೆ. ಸಾಲಿಗ್ರಾಮದ ಲಕ್ಷಣವೆಂದರೆ "ದ್ವಾರದೇಶೇ ಸಮೇಚಕ್ರೇ ದೃಶ್ಯತೇ ನಾಂತರೀಯಕೇ। ವಾಸುದೇವಸ್ಸ

ವಿಜ್ಞೇಯಃ ಶುಕ್ಲಾಭಶ್ಚಾತಿಶೋಭನಃ ॥" ಎಂಬಂತೆ ಅತಿ ಒಳಗಿದ್ದ ಎರಡು ಚಕ್ರ ಬಿಳಿಛಾಯದ ಬಣ್ಣ, ಗಿಡ್ಡಾದ ಆಕಾರ, ಸ್ವಲ್ಪ ಉರುಟು ಇದ್ದು, ಚಂದ್ರಾಭ ದ್ವಾರಕಾ ಪೂಗೀಫಲ, ಛಿದ್ರ ಪೃಷ್ಠ ಪದ್ಮಯುಕ್ತ ನೀಲೋತ್ಪಲ ಎಂಬ ಪ್ರಕಾರಗಳುಂಟು.

೧೫) **ಪ್ರದ್ಯುಮ್ನ** :- ಈ ಮೂರ್ತಿಯ ಬಲದ ಮೇಲಿನ ಕೈಯಲ್ಲಿ ಶಂಖವೂ, ಬಲಗೈಯಲ್ಲಿ ಗದಾ ಇದ್ದು, ಎಡದ ಮೇಲಿನ ಕೈಯಲ್ಲಿ ಪದ್ಮವೂ, ಎಡಗೈಯಲ್ಲಿ ಚಕ್ರವೂ ಇರುತ್ತದೆ. ಸೂಕ್ಷ್ಮವಾದ ಚಕ್ರ, ಹೆಚ್ಚು ತೂಕ, ಉದ್ದವಿದ್ದು, ಬಿಳಿ ಛಾಯೆ ಬಣ್ಣದಿಂದ ಕೂಡಿದ್ದು, ಮಕರಾಭ, ಜಪಾಕುಸುಮ, ಬಹು ಛಿದ್ರ ಕೃಷ್ಣವರ್ಣ ಎಂಬ ಪ್ರಕಾರಗಳಿವೆ.

೧೬) **ಅನಿರುದ್ಧ** :- ಮೂರ್ತಿ ಹಾಗೂ ಸಾಲಿಗ್ರಾಮದ ಲಕ್ಷಣ- ಬಲದ ಮೇಲಿನ ಕೈಯಲ್ಲಿ ಗದಾ, ಬಲಗೈಯಲ್ಲಿ ಶಂಖ, ಎಡದ ಮೇಲಿನ ಕೈಯಲ್ಲಿ ಪದ್ಮ ಹಾಗೂ ಎಡಗೈಯಲ್ಲಿ ಚಕ್ರವಿದ್ದು, ಕಪ್ಪು ಬಣ್ಣ ಉರುಟಾದ ಆಕಾರ, ಮೂರುಗೆರೆ, ದ್ವಾರದಲ್ಲಿ ಪದ್ಮದ ಚಿನ್ಹ ಇರುತ್ತದೆ. ಇದರಲ್ಲಿಯೂ ತ್ರಿರೇಖಾ ಕೃಷ್ಣವರ್ಣ ಎಂಬ ನಾಲ್ಕೈದು ಪ್ರಕಾರಗಳಿವೆ.

೧೭) **ಪುರುಷೋತ್ತಮ** :- ಉತ್ತಮನಾದಂಥ ಪುರುಷೋತ್ತಮನು ತನ್ನ ಬಲದ ಮೇಲಿನ

ಕೈಯಲ್ಲಿ ಪದ್ಮವನ್ನೂ, ಬಲಗೈಯಲ್ಲಿ ಶಂಖವನ್ನೂ, ಎಡದ ಮೇಲಿನ ಕೈಯಲ್ಲಿ ಗದಾವನ್ನೂ, ಎಡಗೈಯಲ್ಲಿ ಚಕ್ರವನ್ನೂ ಹಿಡಿದುಕೊಂಡವನಾಗಿದ್ದು- "ಕೃಷ್ಣವರ್ಣಂ ಸೂಕ್ಷ್ಮ ರಂಧ್ರಂ ದೂರೇ ಚಕ್ರಾದ್ವಯಾನ್ವಿತಮ್। ಶಿರಸ್ಯೇಕಂ ಬೃಹಚ್ಚಕ್ರಂ ಜ್ಞೇಯಂ ತತ್ಪುರುಷೋತ್ತಮಮ್॥" ಎಂಬ ಶ್ಲೋಕದಂತೆ ಸೂಕ್ಷ್ಮ ರಂಧ್ರ ಕಪ್ಪು ಬಣ್ಣ ಎರಡು ಚಕ್ರ ಮಧ್ಯದಲ್ಲಿ ಉಬ್ಬು ಇದು ಸಾಲಿಗ್ರಾಮದ ಲಕ್ಷಣವು. ನಾಲ್ಕೈದು ಚಕ್ರಗಳಿಂದ ಕೂಡಿದ್ದರೆ ಅನಂತ ಪುರುಷೋತ್ತಮ ಸಾಲಿಗ್ರಾಮವು. ಇದರಲ್ಲಿಯೂ ಮೂರು-ನಾಲ್ಕು ಪ್ರಕಾರಗಳಿವೆ.

೧೮) **ಅಧೋಕ್ಷಜ :-** ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಪದ್ಮ, ಮೇಲಿನ ಬಲಗೈಯಲ್ಲಿ ಗದಾ, ಮೇಲಿನ ಎಡಗೈಯಲ್ಲಿ ಚಕ್ರ ಹಿಡಿದಿರುತ್ತಾನೆ. ಅತಿ ಕಪ್ಪು, ಉರುಟಾದ ಆಕಾರ, ನಡು ನಡುವೆ ಉದ್ದುದ್ದವಾದ ಕೆಂಪು ಮಿಶ್ರಿತ ಗೆರೆ ಅತಿ ಸೂಕ್ಷ್ಮವಾದ ಚಕ್ರಗಳು ಕಾಣುತ್ತವೆ.

೧೯) **ನರಸಿಂಹ :-** ಈ ಮೊದಲೇ ಇದರಲ್ಲಿ ಬರೆಯಲಾಗಿದೆ. ಬಲಗೈಯಲ್ಲಿ ಗದೆ, ಎಡಗೈಯಲ್ಲಿ ಚಕ್ರ, ಮೇಲಿನ ಬಲಗೈಯಲ್ಲಿ ಪದ್ಮ, ಮೇಲಿನ ಬಲಗೈಯಲ್ಲಿ ಶಂಖ.

೨೦) **ಅಚ್ಯುತ :-** ಬಲದ ಮೇಲಿನ ಕೈಯಲ್ಲಿ ಪದ್ಮ, ಬಲಗೈಯಲ್ಲಿ ಚಕ್ರ, ಎಡದ ಮೇಲಿನ

ಕೈಯಲ್ಲಿ ಶಂಖ, ಎಡಗೈಯಲ್ಲಿ ಗದಾ ಇರುತ್ತದೆ. "ಚತುರ್ಭಿಶ್ಚಾಷ್ಟ ಚಕ್ರೈಶ್ಚ ವಾಮದಕ್ಷಿಣ ಪಾರ್ಶ್ವಗೈ। ಅತಿವೃತ್ತ ಮುಖಂ ಹ್ಯೇಕಂ ಕುಂಡಲದ್ವಾಯ ಶೋಭಿತಃ॥" ಎಡ-ಬಲ ಭಾಗದಲ್ಲಿ ಎರಡು ಇಲ್ಲವೆ ನಾಲ್ಕು ಚಕ್ರಗಳು, ಬಿಲ್ಲಿನ ಗುರುತುಗಳು, ಕಪಿಲ ಬಣ್ಣದ ಸಾಲಿಗ್ರಾಮವು. ಹಿಮಾಂಶು ವರ್ಣ ದಧಿವರ್ಣಾಭ ಎಂಬ ಅನೇಕ ಪ್ರಕಾರಗಳಿವೆ.

೨೧) ಜನಾರ್ದನ :- ಈ ಮೂರ್ತಿಯ ಲಕ್ಷಣಗಳೆಂದರೆ ಬಲದ ಮೇಲಿನ ಕೈಯಲ್ಲಿ ಚಕ್ರವನ್ನೂ, ಬಲಗೈಯಲ್ಲಿ ಶಂಖವನ್ನೂ, ಎಡದ ಮೇಲಿನ ಕೈಯಲ್ಲಿ ಗದಾ ಮತ್ತು ಎಡಗೈಯಲ್ಲಿ ಪದ್ಮವನ್ನೂ ಹಿಡಿದಿರುತ್ತಾನೆ. ಇನ್ನು ಸಾಲಿಗ್ರಾಮದ ಲಕ್ಷಣವೆಂದರೆ ಒಳಗಡೆ ನಾಲ್ಕು ಚಕ್ರ, ಉರುಟು ಮೈ, ಕೆಂಪು ಮಿಶ್ರಿತ ಹಳದಿ ಕಾಂತಿ "ಅಂತರ್ಲಿಕ್ಷ್ಯಶ್ಚತುಶ್ಚಕ್ರಂ ವರ್ತುಲಂ ಚೋತ್ಪಲ ಪ್ರಭಮ್। ಜನಾರ್ದನಂ ವಿಜಾನೀಯಾದ್ವನಮಾಲಾ ವಿಭೂಷಿತಮ್॥" ಎಂದು ವರ್ಣಿಸಿದೆ. ಇದರಲ್ಲಿಯೂ ಬೇರೆ ಬೇರೆ ಪ್ರಕಾರಗಳುಂಟು.

೨೨) ಉಪೇಂದ್ರ :- ಉಪೇಂದ್ರೋಮಣಿವರ್ಣಾಭೋ ಹ್ರಸ್ವಾಚಕ್ರಾತಿ ಶೋಭನಃ। ಕೋಮಲೋವೃತ್ತಕಶ್ಚೈವ ಸತು ಪಾರ್ಶ್ವೇ ದ್ವಿಚಕ್ರವಾನ್॥" ಎಂದು ಹೇಳಿದಂತೆ ಗಿಡ್ಡದಾದ

ಚಕ್ರಗಳು ಹೊರಮೈ ಉರುಟು, ಎಡಬಲದಲ್ಲಿ ಚಕ್ರ, ನೀಲವರ್ಣದ ಬಣ್ಣದ ಸಾಲಿಗ್ರಾಮವು. ಮೂರ್ತಿಯು ತನ್ನ ಬಲಗೈಯಲ್ಲಿ ಚಕ್ರವನ್ನೂ, ಎಡಗೈಯಲ್ಲಿ ಶಂಖವೂ, ಬಲದ ಮೇಲಿನ ಕೈಯಲ್ಲಿ ಗದಾ ಇದ್ದು, ಎಡದ ಮೇಲಿನ ಕೈಯಲ್ಲಿ ಪದ್ಮವಿರುತ್ತದೆ.

೨೩) ಹರಿಮೂರ್ತಿ :- ಹಾಗೂ ಸಾಲಿಗ್ರಾಮದ ಲಕ್ಷಣಗಳು- ಹರಿಯು ತನ್ನ ಬಲಗೈಯಲ್ಲಿ ಪದ್ಮವನ್ನೂ, ಎಡಗೈಯಲ್ಲಿ ಶಂಖವನ್ನೂ, ಬಲದ ಮೇಲಿನ ಕೈಯಲ್ಲಿ ಚಕ್ರವನ್ನೂ, ಎಡದ ಮೇಲಿನ ಕೈಯಲ್ಲಿ ಗದಾದಿಂದ ಭೂಷಿತನಾಗಿದ್ದು, ದೊಡ್ಡ ಮುಖ, ಎರಡು ಚಕ್ರ, ಕಪ್ಪುಬಣ್ಣ, ಉರುಟು ಮೈ ಇರುತ್ತದೆ. "ಬೃಹದ್ವಾರ ಸಮಾಯುಕ್ತಃ ಶ್ಯಾಮವರ್ಣೋ ದ್ವಿಚಕ್ರಯುಕ್। ವರ್ತುಲೋ ಮೃದುಲಶ್ಚೈವ ಹರಿಃ ಲೋಹಿತ ವರ್ಣಕಃ॥" ಎಂದು ವರ್ಣಿಸಿದೆ.

೨೪) ಶ್ರೀಕೃಷ್ಣ :- ದಶಾವತಾರದ ಎಂಟನೆಯದರಲ್ಲಿ ಇದರ ಬಗ್ಗೆ ತಿಳಿಸಲಾಗಿದೆ.

ಈ ಎಲ್ಲ ಸಾಲಿಗ್ರಾಮಗಳು ಈ ಕೆಳಗೆ ಬರೆದ ಫಲಗಳನ್ನು ಕೊಡುತ್ತವೆ. ಇಷ್ಟಾರ್ಥ ಸೌಖ್ಯ ಸಂಪತ್ತನ್ನು ಶತ್ರುಭಯ ನಾಶ ಸರ್ವಾಭಿಷ್ಟ ಫಲವನ್ನೂ, ಸರ್ವಮಂಗಲ ಶುಭ ಸೂಚಕವನ್ನೂ, ಶುಭ ಫಲವನ್ನೂ, ಅಪಮೃತ್ಯು ಪರಿಹಾರವನ್ನೂ, ಲೌಕಿಕ ವಿಷಯದ

ಸುಖಭೋಗಗಳನ್ನೂ, ಪುತ್ರ-ಪೌತ್ರ ಸಂತಾನವನ್ನೂ, ಧನ-ಧಾನ್ಯ ಆಯುರಾರೋಗ್ಯ, ಐಶ್ವರ್ಯ ಸದ್ಗುಣ ಶಾಂತಿ ಕೀರ್ತಿಯನ್ನೂ ಕೊಟ್ಟು ಕುಲೋದ್ಧಾರವನ್ನು ಮಾಡುತ್ತವೆ. ಇನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಅನೇಕ ಸಾಲಿಗ್ರಾಮಗಳು ಬಹು ವೈಭವದಿಂದ ಪೂಜಿಸಲ್ಪಡುತ್ತವೆ. ಅಂತಹವುಗಳಲ್ಲಿ ಹಯಗ್ರೀವ, ಯಜ್ಞಮೂರ್ತಿ, ಪುಂಡರೀಕಾಕ್ಷ, ಮುಕುಂದ, ಪರಮಹಂಸ, ವಟಪತ್ರುಶಾಯಿ ಲಕ್ಷ್ಮೀಪತಿ, ವೈಕುಂಠ ಮೂರ್ತಿ, ಶಿಂಶುಮಾರ, ಹಂಸ, ವಿಶ್ವಂಭರ, ಗರುಡಧ್ವಜ, ಪಾರಿಜಾತ, ಸತ್ಯವೀರ, ಪೀತಾಂಬರ ಎಂಬ ಅನೇಕ ದೇವತೆಗಳ ಸಾಲಿಗ್ರಾಮ ಪೂಜಿಸಲ್ಪಡುತ್ತವೆ.

ಮನೆಗಳಲ್ಲಿ ಸುದರ್ಶನಗಳಿರುತ್ತವೆ. ಅವುಗಳಲ್ಲಿಯೂ ಬೇರೆ ಬೇರೆ ಪ್ರಕಾರಗಳಿವೆ- ೧) ಅಭಯ ಸುದರ್ಶನ ೨) ಮಹಾವಿಷ್ಣು ಸುದರ್ಶನ ೩) ನೃಸಿಂಹ ಸುದರ್ಶನ ೪) ಲಕ್ಷ್ಮೀಸುದರ್ಶನ ೫) ದೇವ ಸುದರ್ಶನ ೬) ಚಕ್ರಪಾಣಿ ಸುದರ್ಶನ ೭) ಯತಿ ಸುದರ್ಶನ ಎಂಬವುಗಳುಂಟು.

ಸಾಲಿಗ್ರಾಮಗಳ ಬಗ್ಗೆ ತಿಳಿಯಬೇಕಾದ ವಿಷಯದ ಬಗ್ಗೆ ಇನ್ನೂ ಬಹಳಷ್ಟು ಇವೆ.

ಲಕ್ಷಾಂತರ ಜನರ ಮನೆಗಳಲ್ಲಿ ಅನೇಕ ತರಹದ ಸಾಲಿಗ್ರಾಮಗಳಿವೆ. ಒಂದಕ್ಕೊಂದು ಹೋಲುವ ಸಾಲಿಗ್ರಾಮ ಸೇರಿಸಲು ಕಠಿಣ. ನಾವೇ ಇಂತಹ ಮಾಹಿತಿಯಿಂದ ನಿರ್ಣಯಿಸಿಕೊಳ್ಳಬೇಕು.

ನೃಸಿಂಹ ಸಾಲಿಗ್ರಾಮ ಯಾವವು?

೧) ಯೋಗಾನೃಸಿಂಹ ೨) ಅಧೋಮುಖ ನೃಸಿಂಹ ೩) ಆಕಾಶನೃಸಿಂಹ ೪) ಕುಕ್ಷಿನೃಸಿಂಹ ೫) ಜ್ವಾಲಾನೃಸಿಂಹ ೬) ಸರ್ವತೋಮುಖನೃಸಿಂಹ ೭) ವಿಭೀಷಣನೃಸಿಂಹ ೮) ಪಾತಾಲನೃಸಿಂಹ ೯) ಬಾಲನೃಸಿಂಹ ೧೦) ಲಕ್ಷ್ಮೀನೃಸಿಂಹ ೧೧) ಕಪಿಲನೃಸಿಂಹ ೧೨) ಅಘೋರನೃಸಿಂಹ ೧೩) ಮಹಾನೃಸಿಂಹ ೧೪) ರಾಕ್ಷಸಾಂತಕನೃಸಿಂಹ ೧೫) ಶುದ್ಧನೃಸಿಂಹ ೧೬) ಹಾರನೃಸಿಂಹ ೧೭) ವಿದಾರಣನೃಸಿಂಹ ೧೮) ವಿವೃತಾಸ್ಯನೃಸಿಂಹ ಎಂಬ ವಿವಿಧ ರೀತಿಯ ಸಾಲಿಗ್ರಾಮಗಳುಂಟು.

ಸಾಲಿಗ್ರಾಮಗಳಲ್ಲಿ ಏಕಚಕ್ರದಿಂದ ಹಿಡಿದು ದ್ವಾದಶ ಚಕ್ರದವರೆಗೂ ಇದ್ದು, ಕೆಲವಂತೂ ನೋಡಲು ಅಪರೂಪವು. "ಪ್ರಮೇಯರತ್ನಾಕಾ ಪ್ರಕಾರವಾಗಿ ೫೧,೫೦೦ ಪ್ರಕಾರಗಳಿವೆ"

ಎಂದು ತಿಳಿದು ಬರುತ್ತದೆ.

ಪುರಾಣಗಳಲ್ಲಿಯ ಪ್ರಸ್ತಾವನೆಯ ಪ್ರಕಾರ ಸಾಲಿಗ್ರಾಮದ ಬಗ್ಗೆ ಇದರಲ್ಲಿ ತಿಳಿಸಿದೆಯಾದರೂ ೧೮ ಪುರಾಣಗಳಲ್ಲಿಯ ನಾಲ್ಕೈದರಲ್ಲಿ ಬೇರೆ ಬೇರೆಯಾಗಿ ವರ್ಣಿಸಲಾಗಿದೆ. ಬ್ರಹ್ಮವೈವರ್ತ ಪುರಾಣದಲ್ಲಿ ಬ್ರಹ್ಮ-ರುದ್ರ ದೇವರ ಆಜ್ಞೆಯಂತೆ ಶನೇಶ್ವರನು ವಿಷ್ಣುವಿನ ಮೇಲೆ ಶಕ್ತಿಯನ್ನು ಪ್ರಯೋಗಿಸಲು ಬಂದಾಗ ವಿಷ್ಣುವು ಗಂಡಕೀ ನದಿಯ ತೀರದಲ್ಲಿ ಶೈಲಮಾಯಾ ಪರ್ವತವಾಗಿ ನಿರ್ಮಿತನಾದನು. ಇದರಿಂದ ಕೋಪಿತನಾದ ಶನಿಯು ತನ್ನ ಆಯುಧದಿಂದ ಪರ್ವತಕ್ಕೆ ಬಲವಾದ ಶಕ್ತಿಯಿಂದ ಹೊಡೆದಾಗ ಅದರ ಪೆಟ್ಟಿನಿಂದ ಆ ಪರ್ವದಲ್ಲಿಯ ಕಲ್ಲುಗಳು ಚೂರು ಚೂರಾಗಿ ಬಿದ್ದವು. ಅವುಗಳಲ್ಲಿ ಶನಿಯು ಹೊಕ್ಕು ರಂಧ್ರ ಮಾಡಿದನು. ಅವುಗಳೇ ಸಾಲಿಗ್ರಾಮಗಳಾದವೆಂದು ಹೇಳುತ್ತದೆ.

ಬ್ರಹ್ಮ ಪುರಾಣದಲ್ಲಿ ಬೇರೊಂದು ರೀತಿಯಲ್ಲಿ ಬರೆಯಲಾಗಿದೆ. ವಿಷ್ಣುವು ಮೋಹಿನಿ ರೂಪವನ್ನು ತಳೆದಾಗ ಶಿವನು ವಿಷ್ಣುವಿನ ಮೋಹಿನಿ ರೂಪವೆಂದು ತಿಳಿಯದೇ ಅಪೂರ್ವ ಸುಂದರಿಯೆಂದು ಭಾವಿಸಿ ಅವನನ್ನು ಆಲಿಂಗನ ಮಾಡಿಕೊಳ್ಳುವ ಸಮಯದಲ್ಲಿ ಬಂದ

ಬೆವರೇ ಈ ಗಂಡಕಿ ನದಿಯು ಎಂದು ಹೇಳಿದೆ. ಒಂದು ಕಪ್ಪು ನೀರಾಗಿ ಪೂರ್ವಕ್ಕೂ ಶ್ವೇತಾ ಎಂಬುದೂ ಇನ್ನೊಂದು ಬಿಳಿ ನೀರಾಗಿ ಪಶ್ಚಿಮಕ್ಕೂ ಹರಿದವು. ಸ್ಕಂದ ಪುರಾಣದಲ್ಲಿ ಗಂಡಕೀ ನದಿಯು ಸಾವಿರಾರು ವರ್ಷಗಳಿಂದ ಗಾಳಿಯನ್ನೇ ಸೇವಿಸುತ್ತ ತನ್ನ ಒಡಲಲ್ಲಿ ಬಿದ್ದ ಎಲೆಗಳನ್ನು ಭಕ್ಷಿಸುತ್ತ ಶ್ರೀವಿಷ್ಣುವಿನ ನಾಮ ಜಪಿಸುತ್ತ ಇರುತ್ತಿರುವ ಇಂತಹ ಗಂಡಕೀ ನದಿಯ ಸ್ನಾನವು ವಿಷ್ಣು ಪ್ರೀತಿಕರವಾಗಿದೆ.

ದ್ವಾಪರ ಯುಗದಲ್ಲಿ ಒಮ್ಮೆ ಶ್ರೀಕೃಷ್ಣನಿಗೆ ವಿಪರೀತ ತಲೆನೋವುಂಟಾದಾಗ ತುಳಸೀ ದೇವಿಯು ಸಾಲಿಗ್ರಾಮದ ಶಿಲೆಯಿಂದ ಕಡಿಮೆ ಮಾಡಿದಳೆಂದು ಹೇಳಿದೆ. ಸಾಲಿಗ್ರಾಮ ಮನೆಯಲ್ಲಿ ಎಂತಹದೇ ಇರಲಿ ಅದಕ್ಕೆ ಭಯಪಡಬೇಕಾದ ಅವಶ್ಯಕತೆ ಇಲ್ಲ. ಕೆಲವು ವೈದಿಕರಂತೂ ಜನರಲ್ಲಿ ಬಹಳ ಗೊಂದಲವನ್ನುಂಟು ಮಾಡುತ್ತಾರೆ. ಒಡೆದು ತುಂಡಾದ ಸಾಲಿಗ್ರಾಮ ಪೂಜಿಸಬಾರದು. ನಾರಸಿಂಹ ಸಾಲಿಗ್ರಾಮ ಬಲು ಉಗ್ರ ಹೀಗೆ. ಮಡಿ ಮಾಡಬೇಕು, ಹಾಗೆ ಮಡಿ ಮಾಡಬೇಕು ಎಂದು ಗಾಬರಿಪಡಿಸುತ್ತಾರೆ. ಸಾಲಿಗ್ರಾಮದಲ್ಲಿ ಭಗವಂತನು ನಿತ್ಯ ವಾಸವಾಗಿರುವದರಿಂದ ಅವನು ಯಾರಿಗೂ ಎಂದೂ ಭಯ, ನಾಶ,

ರೋಗಪೀಡೆ ಇತ್ಯಾದಿ ಎಂದು ಕೊಡನು. ಸಾಲಿಗ್ರಾಮದ ಬಗ್ಗೆ ಸಂಶಯಪಡುವವರು ದೇವರ ಬಗ್ಗೆ ಸಂಶಯಪಟ್ಟಂತೆ. ವಿಗ್ರಹಾರಾಧನೆಗಿಂತಲೂ ಇದರ ಪೂಜೆ ಬಹಳ ಸುಲಭ. ಪೂಜಿಸಲು ಉಪದೇಶ, ಮಂತ್ರ, ಪೂಜಾ ವಿಧಾನ, ಪುರೋಹಿತರ ಅವಶ್ಯಕತೆ ಯಾವದೂ ಬೇಡ. ಹೇಗೆ ಪೂಜಿಸಿದರೂ ತಪ್ಪಿಲ್ಲ. ಹೀಗೆಂದ ಮಾತ್ರಕ್ಕೆ ಇದನ್ನೇ ಸದುಪಯೋಗ ಮಾಡಿಕೊಳ್ಳಬಾರದು. ಎಲ್ಲ ವಿಧಿಗಳೊಂದಿಗೆ ಶಾಸ್ತ್ರೋಕ್ತವಾಗಿ ಅರ್ಚಿಸಿದರೆ ಪರಮಾತ್ಮನು ಸಂತುಷ್ಟನಾಗುವನು. "ಗಂಧ ಮೌಲ್ಯಾರ್ಚ್ಯ ನೈವೇದ್ಯೈ ಪುಷ್ಪ ಧೂಪಾನು ಲೇಪನೈ। ಅರ್ಚಯೇನ್ಮಾನಮೋ ಯಸ್ತು ಕಲೌ ಭಕ್ತಿ ಪರಾಯಣಃ॥ ಸರ್ವಪಾಪ ವಿನಿರ್ಮುಕ್ತೋ ವಿಷ್ಣು ಲೋಕೇವಸೇಚ್ಚರಂ॥ ಎಂಬ ಶಾಸ್ತ್ರದಂತೆ ವಿಧಿ ಪ್ರಕಾರ ಪೂಜಿಸಬೇಕು. ಸಾಲಿಗ್ರಾಮ ಪೂಜೆಯಲ್ಲಿ ಪರಮಾತ್ಮನ ಆವಾಹನೆ ವಿಸರ್ಜನೆಗೆ ಅವಕಾಶವೇ ಇಲ್ಲ.

ಖಂಡಿತಾ ಸ್ಫುಟಿತಾ ಭಿನ್ನಾವಹ್ನಿದಗ್ಧಾ ತಥೈವ ಚ।
ಸಾಲಿಗ್ರಾಮ ಶಿಲಾಯತ್ರ ತತ್ರ ದೋಷೋ ನ ವಿದ್ಯತೇ॥

ಈ ಪ್ರಮಾಣ ವಾಕ್ಯದಂತೆ ತುಂಡಾಗಿದ್ದರೂ, ಬಿರಿದಿದ್ದರೂ, ಒಡೆದಿದ್ದರೂ, ಅಗ್ನಿಯಲ್ಲಿ

ಬೆಂದಿದ್ದರೂ, ಸಾಲಿಗ್ರಾಮದಲ್ಲಿ ಯಾವ ದೋಷವೂ ಇಲ್ಲ.

ಇಷ್ಟು ಮಹತ್ವದ್ದಾಗಿದ್ದ ಸಾಕ್ಷಾತ್ ಪರಮಾತ್ಮನ ಸನ್ನಿಹಿತವಾಗಿದ್ದ ಈ ಸಾಲಿಗ್ರಾಮದ ಪೂಜೆಯನ್ನು ಭಾರತೀಯರಾದ ನಾವು ಬೇರೆ ಬೇರೆ ರೀತಿಯಿಂದ ಪೂಜಿಸುತ್ತಿದ್ದರೂ ಪೂಜಾ ಪದ್ಧತಿಯಲ್ಲಿ ಷೋಡಶೋಪಚಾರ ಪದ್ಧತಿ ಪ್ರಚಲಿತವಿದ್ದ ಮೂಲಕ ಅದನ್ನು ಹೇಗೆ ಮಾಡಬೇಕೆಂಬುದನ್ನು ಬರೆಯಲಾಗಿದೆ. (ಮಾಹಿತಿಗಾಗಿ ಬರೆದಿದೆ ಮಂತ್ರ)

೧) **ಉಪಚಾರ :–** ೧) ಅರ್ಘ್ಯ ೨) ಪಾದ್ಯ ೩) ಆಚಮನೀಯ ೪) ಮಧುಪರ್ಕ ೫) ಪುನಾಚಮನ ೬) ಸ್ನಾನ ೭) ವಸ್ತ್ರ ೮) ಭೂಷಣ ೯) ಯಜ್ಞೋಪವೀತ ೧೦) ಆಸನ

೨) **ಪಂಚೋಪಚಾರ :–** ೧) ಗಂಧ ೨) ಪುಷ್ಪ ೩) ಧೂಪ ೪) ದೀಪ ೫) ನೈವೇದ್ಯ

೩) **ಅನುಪಚಾರ :–** ೧) ಮುಖವಸ್ತ್ರ ೨) ತಾಂಬೂಲ ೩) ದರ್ಪಣ ೪) ಛತ್ರ ೫) ಚಾಮರ ೬) ಪಾದುಕೆ

ಹೀಗೆ ೧೬ ಪ್ರದಕ್ಷಣ ನಮಸ್ಕಾರ (ಮಾಹಿತಿಗಾಗಿ ಮಾತ್ರ ಬರೆದಿದೆ)

ಪಾದ್ಯೋ ಶಾಮಾಸ ದೂರ್ವಾಬ್ಜ ವಿಷ್ಣುಕ್ರಾಂತಾದಿ ರಿಷ್ಯತೆ।

ಗಂಧ ಪುಷ್ಪಾಕ್ಷತ ಕುಶಾಗ್ರ ತಿಲಸರ್ವದಾ ॥

ದೂರ್ವಾಚೇತಿ ಕ್ರಮಾದರ್ಘ್ಯೇದ್ರ ವ್ಯಾಷ್ಟಕಮುದೀರತಮ್ ।

ಪಾದ್ಯ ಅಂದರೆ :- ಶಮಾಕ ದೂರ್ವಾ ಕಮಲ ವಿಷ್ಣುಕ್ರಾಂತ ಇವುಗಳಿಂದ ಕೂಡಿದ ಕಲಶೋದಕ.

ಅರ್ಘ್ಯ ಅಂದರೆ :- ಗಂಧ ಪುಷ್ಪ ಅಕ್ಷತೆ ಯವ ತಿಲ ಬಿಳಿ ಸಾಸವಿ ದೂರ್ವಾ ಕುಶ ಈ ಎಂಟು ದ್ರವ್ಯ.

ಆಚಮನ ಅಂದರೆ :- ಜಾಜಿ ಲವಂಗ ಕಂಕೋಳ ಎಂಬ ಪರಿಮಳ ದ್ರವ್ಯದ ತೀರ್ಥಕ್ಕೆ.

ಸಾಲಿಗ್ರಾಮ ದೇವಪೂಜಾ ಪದ್ಧತಿ

ದೇವಪೂಜಾ ಪದ್ಧತಿಯನ್ನು ಅನೇಕ ಮಹನೀಯರು ಪುಸ್ತಕ ರೂಪದಲ್ಲಿ ಪ್ರಕಟಿಸಿ ನಮ್ಮೆಲ್ಲರಿಗೆ ಉಪಯುಕ್ತವಾಗುವಂತೆ ಮಾಡಿದ್ದಾರೆ. ಅನುಕೂಲಸ್ಥಿತಿ ಅನಾನುಕೂಲಸ್ಥಿತಿ ಅಂದರೆ ವಿಸ್ತಾರವಾಗಿ ಮತ್ತು ಸಂಕ್ಷಿಪ್ತವಾಗಿಯೂ ಪೂಜಾ ಪದ್ಧತಿಯ ಪುಸ್ತಕಗಳು ಎಲ್ಲ ಕಡೆಗೂ ಲಭ್ಯವಾಗಿವೆ. ಭಾರತೀಯ ಸಂಸ್ಕೃತಿಯಲ್ಲಿ ಪೂಜಾ ಪದ್ಧತಿ ಬಹಳ ಶ್ರೇಷ್ಠವಾದದ್ದು. ಭಗವಂತನ ಅನುಗ್ರಹವನ್ನು ಬಯಸುವ ಶ್ರದ್ಧಾಳು ಆಸಕ್ತರು. ಯಾವ ಮತ ಸ್ಥಾನೇ

ಇರಲಿ, ತಮ್ಮ ಮತ ಪದ್ಧತಿಯಂತೆ ಶ್ರದ್ಧಾಪೂರ್ವಕವಾಗಿ ಪೂಜಿಸಿದರೆ ಸಾಕು ಮತ್ತೊಂದು ಮತಸ್ಥರ ಪೂಜಾ ಪದ್ಧತಿಯನ್ನು ಹಳಿಯುವದು ಬೇಡ. ಅದು ಮಹಾಮೂರ್ಖತನವು "ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥" ಆಕಾಶದಿಂದ ಬಿದ್ದ ನೀರು ಸಮುದ್ರವನ್ನು ಯಾವ ರೀತಿಯಾಗಿ ಹೋಗಿ ಸೇರುತ್ತದೋ ಹಾಗೆಯೇ ಸಮಸ್ತ ದೇವತೆಗಳಿಗೆ ಮಾಡಿದ ನಮಸ್ಕಾರವು ಪರಮಾತ್ಮನಿಗೆ ಹೋಗಿ ಸೇರುತ್ತದೆ. ದೇವರು ನಮ್ಮ ಮನೆಯಲ್ಲಿಲ್ಲ. ಆ ದೇವನ ಮನೆಯಲ್ಲಿಯೇ ನಾವಿದ್ದೇವೆ. ಅಂತೆಯೇ ಅವನು ನಮ್ಮನ್ನು ಸದಾ ರಕ್ಷಿಸುತ್ತಾನೆ. ಅದಕ್ಕಾಗಿ ಅವನ ಉಪಕಾರವನ್ನು ಹೆಜ್ಜೆ ಹೆಜ್ಜೆಗೆ ಸ್ಮರಿಸಬೇಕು. ಅವನಿಗಾಗಿ ನಾವು ಸ್ವಲ್ಪವಾದರೂ ಧ್ಯಾನಿಸಬೇಕು, ಪೂಜಿಸಬೇಕು. ಪರಮಾತ್ಮನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಬಣ್ಣಿಸಿದರೂ ಪೂಜಿಸಿದರೂ ಕಡಿಮೆಯೇ. ಅಂತಹ ಪರಮಾತ್ಮನ ಪೂಜೆಯನ್ನು ಶುದ್ಧವಾಗಿ ನಿರ್ಮಲವಾಗಿ ಶಾಂತವಾಗಿ ಸ್ವಚ್ಛವಾಗಿ ಕ್ರಮಬದ್ಧವಾಗಿ ಪೂಜಿಸಬೇಕು. ಆ ಪರಮಾತ್ಮನು ನಮಗೆ ಕೊಟ್ಟದ್ದನ್ನು ನಾವು ಅವನಿಗೆ ಅರ್ಪಿಸುವದೇ ಭಕ್ತಿಯು, ಪೂಜೆಯು. ಇಲ್ಲದ ಸಮಸ್ಯೆಗಳನ್ನಿಟ್ಟುಕೊಂಡು ಅದನ್ನೇ

ದೊಡ್ಡದನ್ನಾಗಿ ಮಾಡಿ ಪೂಜೆ ಬಿಡುವುದಕ್ಕಿಂತ ಇದ್ದುದರಲ್ಲಿಯೇ ಅನುಕೂಲ ಮಾಡಿಕೊಂಡು ಮೂರು ತಾಸು ಪೂಜೆ ಮಾಡುವದಕ್ಕಿಂತ ಮೂವತ್ತು ನಿಮಿಷದಲ್ಲಿ ಶ್ರದ್ಧಾ-ಭಕ್ತಿಯಿಂದ ಗಂಧ ತುಳಸೀ ಹೂವು ಗಂಟೆ ದೀಪ ಸಹಿತ ಪೂಜೆಗೆ ಬೇಕಾಗುವ ಸಾಹಿತ್ಯವನ್ನು ಇಟ್ಟುಕೊಂಡು ಒದ್ದೆ ಬಟ್ಟೆ ಉಟ್ಟುಕೊಳ್ಳದೆ ಹರಿದ ವಸ್ತ್ರಧಾರಣ ಮಾಡಬಾರದು. ಕಪ್ಪು ಮತ್ತು ನೀಲಿಬಟ್ಟೆ ಉಟ್ಟುಕೊಳ್ಳಬಾರದು. ಕಚ್ಚೆ ಇಲ್ಲದೆ ಪೂಜೆ ಮಾಡಬಾರದು (ಲುಂಗಿ ಸುತ್ತಿಕೊಳ್ಳಬಾರದು) ಒಂಟಿ ವಸ್ತ್ರದಿಂದ ಪೂಜೆ ಮಾಡಬಾರದು. ಇತ್ಯಾದಿ ಕನಿಷ್ಟ ನೇಮಗಳನ್ನು ಪರಿಪಾಲಿಸಿ ಪೂಜೆಯನ್ನು ಆರಂಭಿಸೋಣ. ಸಮಯವಿದ್ದರೆ ಹಬ್ಬ ಹುಣ್ಣಿವೆ ಹರಿದಿನ ಶುಭ ಕಾರ್ಯಗಳು ಲಗ್ನ ಮುಂಜಿವೆ ಇತ್ಯಾದಿ ದಿನಗಳಲ್ಲಿ ದೇವತಾ ಪೂಜೆಯನ್ನು ವಿಸ್ತಾರವಾಗಿ ವಿಶೇಷವಾಗಿ ವಿಜೃಂಭಣೆಯಿಂದ ಪೂಜೆ ಮಾಡಿ ಆನಂದ ಪಡೆಯಿರಿ.

ಸಂಕ್ಷಿಪ್ತ ದೇವಪೂಜಾ (ಸಾಲಿಗ್ರಾಮ) ಆರಂಭ

ಮೊದಲು ದೇವರಿಗೆ ಕೈಮುಗಿದು ನಮಸ್ಕರಿಸಿ-

ಓಂ ನಾರಾಯಣಾಯ ಪರಿಪೂರ್ಣ ಗುಣಾರ್ಣವಾಯ

ವಿಶ್ವೋದಯ ಸ್ಥಿತಿ ಲಯೋನ್ನಿಯತಿ ಪ್ರದಾಯ
ಜ್ಞಾನಪ್ರದಾಯ ವಿಬುಧಾ ಸುರಸೌಖ್ಯ ದುಃಖ
ಸತ್ಕಾರಣಾಯ ವಿತತಾಯ ನಮೋ ನಮಸ್ತೆ॥
ಯೋವಿಪ್ರಲಂಭ ವಿಪರೀತ ಮತಿ ಪ್ರಭೂತಾನ್
ವಾದಾನ್ ನಿರಸ್ಯಕೃತವಾನ್ ಭುವಿತತ್ವವಾದಂ
ಸರ್ವೇಶ್ವರೋ ಹರಿಃ ರಿತಿ ಪ್ರತಿಪಾದಯಂತವ್
ಆನಂದತೀರ್ಥ ಮುನಿವರ್ಯ ಮಹಂನಮಾಮಿ॥

ದ್ವಾರಪಾಲ ನಮಸ್ಕಾರ

ಪೂರ್ವ ದ್ವಾರೆ– ಶ್ರೀಯೈ ನಮಃ। ಜಯಾಯ ನಮಃ। ವಿಜಯಾಯ ನಮಃ।
ದಕ್ಷಿಣ ದ್ವಾರೆ– ಶ್ರೀಯೈ ನಮಃ। ಬಲಾಯ ನಮಃ। ಪ್ರಬಲಾಯ ನಮಃ।
ಪಶ್ಚಿಮ ದ್ವಾರೆ– ಶ್ರೀಯೈ ನಮಃ। ನಂದಾಯ ನಮಃ। ಸುನಂದಾಯ ನಮಃ।
ಉತ್ತರ ದ್ವಾರೆ– ಶ್ರೀಯೈ ನಮಃ। ಕುಮುದಾಯ ನಮಃ। ಕುಮುದಾಕ್ಷಾಯ ನಮಃ।

ಹೀಗೆ ಅನ್ನುತ್ತ ದಿಕ್ಪಾಲಕರಿಗೆ ಕೈಮುಗಿಯಬೇಕು.

ವಂದೇ ವಿಷ್ಣುಂ ನಮಾಮಿ ಶ್ರಿಯ ಮಥಚ ಭುವಂ ಬ್ರಹ್ಮವಾಯೂಚ ವಂದೇ। ಗಾಯತ್ರೀ ಭಾರತೀಂ ತಾಮಪ ಗರುಡ ಮನಂತಂ ಭಜೇ ರುದ್ರದೇವಂ। ದೇವೀಂ ವಂದೇ ಸುವರ್ಣೀ ಮಹಿಪತಿ ದಯಿತಾಂ ವಾರುಣೀ ಮಪ್ಯ ಮಾಂ ತಾ ಮಿಂದ್ರಾದೀನ ಕಾಮ ಮುಖ್ಯಾನ್ನಪಿಸಕಲ ಸುರಾಂಸ್ತದ್ಗುರಾನ್ಮದ್ಗುರೂಂಶ್ಚ॥

ವಿಷ್ಣುವಿಗೆ ನಮಸ್ಕರಿಸಿದ ನಂತರ ಶ್ರೀದೇವಿ ಭೂದೇವಿ ಬ್ರಹ್ಮ-ವಾಯು ಗಾಯತ್ರಿ ಭಾರತಿ ಗರುಡ ಶೇಷ ರುದ್ರ-ಇಂದ್ರ ಇತ್ಯಾದಿ ಎಲ್ಲ ದೇವತೆಗಳಿಗೂ ನಮಸ್ಕರಿಸಬೇಕು.

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ ಹಿತಾಯಚ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ।

ವೇದ ಪ್ರತಿಪಾದ್ಯನು ಪಶುಗಳಲ್ಲಿ ಶ್ರೇಷ್ಠವಾದ ಗೋವುಗಳಿಗೆ ಮನುಷ್ಯರಲ್ಲಿ ಶ್ರೇಷ್ಠರಾದ ಬ್ರಹ್ಮಜ್ಞಾನಿಗಳಿಗೆ ಜಗತ್ತಿಗೇ ಹಿತನಾದಂತಹ ಪೂರ್ಣಾನಂದನಾದಂತಹ ವೇದ ಪಾಲಕನಾದ ಭಗವಂತನೇ ನಿನಗೆ ನನ್ನ ನಮಸ್ಕಾರಗಳು.

ಅಪರಾಧ ಸಹಸ್ರಾಣಿ ಕ್ರಿಯಂತೆ ಅಹರ್ನಿಶಂ ಮಯಾ

ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪುರುಷೋತ್ತಮ ॥

ದೇವನೇ ನನ್ನಿಂದ ಜೀವನದಲ್ಲಿ ಹಗಲಿರುಳು ಸಾವಿರಾರು ಅಪರಾಧಗಳಾಗಿವೆ. ಎಲ್ಲ ಅಪರಾಧಗಳನ್ನು ಕ್ಷಮಿಸಬೇಕೆಂದು ಕ್ಷಮೆ ಕೋರುವೆ.

ದೇವಗೃಹಸ್ಯ ಕವಾಟ ಉದ್ಘಾಟನೆ ವಿನಿಯೋಗಃ ।

ಯಚ್ಚಕಿಂಚಿತ್ ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿವಾ

ಅಂತರ್ಬಹಿಶ್ಚ ತತ್‌ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ ॥

ಈ ಮಂತ್ರವನ್ನು ಹೇಳಿಕೊಂಡು ದೇವಗೃಹದ ಬಾಗಿಲನ್ನು ತೆಗೆಯಬೇಕು.

ದೀಪ ಪ್ರಜ್ವಾಲನಂ :- ಓಂ ಅಗ್ನಿನಾಗ್ನಿಃ ಸಮಿಧ್ಯತೆ ಕವಿರ್ಗೃಹ ಪತಿರ್ಯುವಾ । ಹವ್ಯವಾಟ ಜುಹ್ವಾಸ್ಯಃ ॥

ಹವಿಸ್ಸನ್ನು ಒಯ್ಯುವವನೂ ಹೋಮಾಧಾರವಾದ ಮುಖವುಳ್ಳವನೂ ಆದ ಅಗ್ನಿದೇವನು ಅಗ್ನಿನಾಮಕ ಹರಿಯ ತೇಜಸ್ಸಿನಿಂದ ಬೆಳಗುತ್ತಾನೆ.

ಭೂತೋಚ್ಚಾಟನೆ :– ಓಂ ಅಪಸರ್ಪಂತು ಯೇ ಭೂತಾಃ ಯೇ ಭೂತಾ ಭುವಿ ಸಂಸ್ಥಿತಾ ಯೇ ಭೂತಾಃ ವಿಘ್ನ ಕರ್ತಾರಃ ತೇ ನಶ್ಯಂತು ಶಿವಾಜ್ಞಯಾ ಅಪಕ್ರಾಮಂತು ಭೂತಾದ್ಯಾಃ ಕ್ರೂರಾಶ್ಚೈವ ತು ರಾಕ್ಷಸಾ। ಯೇ ಜಾತ್ರ ನಿವ ಸಂತ್ಯೇವ ದೈವತಾ ಭುವಿ ಸಂತತಮ್ ತೇಷಾಮಪ್ಯ ವಿರೋಧೇನ ಬ್ರಹ್ಮಕರ್ಮ ಸಮಾರಬೇ ॥

ಪೂಜಾ ಸ್ಥಳವು ಭೂತ–ಪ್ರೇತ–ರಾಕ್ಷಸ ಮುಂತಾದ ದೇವ ಪೂಜೆಗೆ ವಿಘ್ನಕಾರಿಗಳಾದ ಇವರು ಶಿವನ ಅಪ್ಪಣೆಯಿಂದ ದೂರವಾಗಿ ಹೋಗಲಿ ವೇದೋಕ್ತ ಕರ್ಮಗಳನ್ನು ಆರಂಭಿಸಲು ಆನಂದವಾಗಲಿ.

ಪ್ರಾರ್ಥನೆ :– ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೆ ಕರುಣಾರಸ ಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ। ಸತ್ಪತ್ರಗಂಧ ಪುಷ್ಪಾದ್ಯೈ ಅರ್ಚಯಾಮಿ ಯಥಾ ಹರೇ ಅನುಜ್ಞಾಂ ದೇಹಿ ದೇವೇಶ ಸಂಸಾರಾರ್ತಿ ನಿವೃತ್ತಯೇ ॥ ಲಕ್ಷ್ಮೀಕಾಂತ ನಮಸ್ತೇ ಅಸ್ತುಸ್ವಾಮಿನ್ ಭೀತೋಭವಾಂಬುಧೇ ॥ ಪೂಜಯಾಮಿ ಅಹಮದ್ಯ ತ್ವಾ ಪ್ರಸೀದ ಪುರುಷೋತ್ತಮ ॥ ತ್ವಾಮೇವ ಶರಣಂ ಯಾಮಿ ಶರಣಾಗತ ವತ್ಸಲ ॥ ಕುರುಷ್ವ ಸಫಲಾಂ

ಪೂಜಾಂ ಪೂಜಾರ್ಹಂ ಮಾಂ ಚ ಮಾಧವ ॥

ಕರುಣಾರಸ ಪೂರ್ಣವಾದ ನಿನ್ನ ಕಣ್ಣುಗಳಿಂದ ನಮ್ಮನ್ನು ನೋಡು ಗಂಧ ಪುಷ್ಪಾಕ್ಷತೆಗಳಿಂದ ನಿನ್ನನ್ನು ನನ್ನ ಯೋಗ್ಯತೆಗೆ ಅನುಸಾರವಾಗಿ ಪೂಜಿಸುತ್ತೇನೆ. ಸಂಸಾರ ಸಾಗರದಿಂದ ನೊಂದ ನನ್ನನ್ನು ನಿನ್ನ ಪೂಜೆಯಿಂದ ಪ್ರಸನ್ನಗೊಳಿಸು ನನ್ನ ಪೂಜೆಯನ್ನು ಸಫಲಗೊಳಿಸು ನಿನ್ನ ಪೂಜೆಗೆ ನನ್ನನ್ನು ಅರ್ಹನನ್ನಾಗಿ ಮಾಡು.

ಘಂಟಾನಾದ :– ಘಂಟಾಗ್ರೇ ಬ್ರಹ್ಮದೈವತ್ಯಂ ಮುಕುಲೇ ರುದ್ರದೈವತಂ ನಾದೇ ಸರಸ್ವತೀ ಚೈವ ನಾಲೇ ನಾಗಾಧಿ ದೈವತಮ್ ॥ ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಮ್ ಕುರುಘಂಟಾರವಂ ತತ್ರ ದೇವತಾಹ್ವಾನ ಲಾಂಛನಮ್ ॥

ಘಂಟೆಯ ತುದಿಯಲ್ಲಿ ಬ್ರಹ್ಮದೇವರು ಕಿರೀಟಲ್ಲಿ ರುದ್ರದೇವರು, ನಾದದಲ್ಲಿ ಸರಸ್ವತಿ, ನಾಲಿಗೆಯಲ್ಲಿ ಶೇಷದೇವರು ಇದ್ದಾರೆಂದು ತಿಳಿದು ಘಂಟೆಗೆ ಕೈಮುಗಿದು ಬಲಗೈಯಿಂದ ಬಾರಿಸಬೇಕು. ನಮ್ಮ ಎಡಭಾಗಕ್ಕೆ ಘಂಟೆ ಇಟ್ಟುಕೊಂಡಿರಬೇಕು. ನೆಲದ ಮೇಲೆ ಎಂದೂ ಇಡಬಾರದು.

ಪೆಟ್ಟಿಗೆಯಿಂದ ಸಂಪುಟದಲ್ಲಿ– ಓಂ ಸಕ್ತುಮಿವ ತಿತಉನಾ ಪುನಂತೋ ಯತ್ರಧೀರಾ ಮನಸಾ ವಾಚಮಕ್ರತ ಅತ್ರಾಸಖಾಯಾಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿ ಹಿತಾಧಿ ವಾಚಿ ॥

ದೇವರ ಮುಖವಸ್ತ್ರವನ್ನು ತೆಗೆದು ಸಾಲಿಗ್ರಾಮಗಳನ್ನು ತಟ್ಟೆಯಲ್ಲಿ ಸಪ್ಪಳವಾಗದಂತೆ ಕೈಜಾರಿ ಬೀಳದಂತೆ ಇಡಬೇಕು. ಪ್ರತಿಮೆಗಳಿದ್ದರೆ ಮತ್ತೊಂದು ತಟ್ಟೆಯಲ್ಲಿ ಇಡಬೇಕು.

ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ತನ್ನೋ ವಿಷ್ಣುಃ ಪ್ರಚೋದಯಾತ್ ॥

ಶ್ರೀಸೂಕ್ತ :– ಹಿರಣ್ಯವರ್ಣಾಂ ಹರಿಣೀಂ ಸುವರ್ಣ ರಜತಸ್ರಜಾಂ ಚಂದ್ರಾ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋಮ ಆವಹ.......... ವಿಂದೇಯಂ ಪುರುಷಾನಹಂ ಓಂ ॥

ಶ್ರೀಸೂಕ್ತ ಫಲಸ್ತುತಿ :– ಓಂ ಯಃ ಶುಚಿಃ ಪ್ರಯತೋ ಭೂತ್ವಾ ಜುಹು ಯಾದಾಜ್ಯ ಮನ್ವಹಂ.......... ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿ ಗಣಖಚಿತೈಃ ಸ್ನಾಪಿತಾ ಹೇಮಕುಂಭೈ ॥ ನಿತ್ಯಂಸಾ ಪದ್ಮಹಸ್ತಾ ಮಮ ವಸತುಗೃಹೇ ಸರ್ವಮಾಂಗಲ್ಯಯುಕ್ತಾ (ಶ್ರೀಸೂಕ್ತವನ್ನು ಪೂರ್ಣವಾಗಿ ಅನ್ನಬೇಕು)

ಮನೆಯಲ್ಲಿರುವ ಸಾಲಿಗ್ರಾಮವು ಯಾವುದು ಎಂಬುದನ್ನು ಉಚ್ಚರಿಸುತ್ತ ಸರ್ವಜ್ಞನಾದ ಭಗವಂತನನ್ನು ನೆನೆಯುತ್ತ ಕಣ್ತುಂಬ ನೋಡಿ ಕಣ್ಣಿಗೆ ಹಚ್ಚಿಕೊಂಡು ತಟ್ಟೆಯಲ್ಲಿಟ್ಟು ಕೈಮುಗಿಯಬೇಕು.

ಕೃತಾಂಜಲಿ ಪುಟೋಭೂತ್ವಾ ವಿನಯಾನತ ಕಂಧರ ಯಾಜೇತ್ವಾಂ ದೇವ ಪೂಜಾರ್ಥ ಉತ್ತಿಷ್ಠ ತ್ವ ರಮಾಪತೇ ಕೃಪಯಾ ಉತ್ಥೀಯತಾ ತಲ್ಪಾತ್ ತವ ಪೂಜಾ ಕ್ರಿಯಾಯತಃ ॥ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂ ತಸ್ತ್ವೇ ಮಹೇ ॥ ಉಪಪ್ರಯಂತು ಮರುತಸ್ಸುದಾನವ ಇಂದ್ರಪ್ರಾಶೂರ್ಭವಾಸಚಾ ॥ ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೇ ಕರುಣಾರಸ ಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥ ಸಾಲಿಗ್ರಾಮ ನಿವಾಸಾಯ ಕ್ಷೀರಾಬ್ಧಿ ಶಯನಾಯಚ ॥ ಶ್ರೀಶೈಲಾದ್ರಿ ನಿವಾಸಾಯ ಶಿಲಾವಾಸಾಯತೇ ನಮಃ ॥

॥ ನಿರ್ಮಾಲ್ಯ ವಿಸರ್ಜನೆ ॥

॥ ಅಥ ಅಭ್ರೃಂಣೀಸೂಕ್ತಮ್ ॥

ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈಃ ಅಹಂಮಿತ್ರಾ

ವರುಣೋಭಾಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನೋಭಾ ॥ ಅಹಂ ಸೋಮಮಾಹನಸಂ ಬಿಭರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಂ ಅಹಂ ದಧಾಮಿದ್ರವಿಣಂ ಹವಿಷ್ಮತೇ ಸುಪ್ರಾವ್ಯೇ ಯಜಮಾನಾಯಸುನ್ವತೇ ॥ ....

ಅಹಮೇವವಾತ ಇವ ಪ್ರವಾಮ್ಯಾರಭಮಾಣಾಭುವನಾನಿ ವಿಶ್ವಾ। ಪರೋದಿವಾ ಪರಏನಾ ಪೃಥಿವ್ಯೈತಾವತೀ ಮಹಿನಾಸಂಬಭೂವ ॥

ಅಂಭೃಣಿಸೂಕ್ತ ಅನ್ನುತ್ತ ಸಾಲಿಗ್ರಾಮಕ್ಕೆ (ದೇವರ ಪ್ರತಿಮೆಗಳಿದ್ದರೆ) ಅಭಿಷೇಕ ಮಾಡಿ ಆ ಅಭಿಷೇಕದ ನೀರನ್ನು ಬೇರೆ ಗಿಂಡಿಯಲ್ಲಿ ತೆಗೆದಿಟ್ಟು ಪುನಃ ಅದೇ ತಟ್ಟೆಯಲ್ಲಿ ಸಾಲಿಗ್ರಾಮವನ್ನು (ದೇವರ ಪ್ರತಿಮೆಗಳನ್ನು) ಇಡಬೇಕು. ಗಿಂಡಿಯಲ್ಲಿ ತೆಗೆದಿಟ್ಟ ನೀರಿನಲ್ಲಿ ಸ್ವಲ್ಪ ಭಾಗ ಶಂಖಕ್ಕೆ (ಲಕ್ಷ್ಮೀ) ಸ್ನಾನ ಮಾಡಿಸಿ ಉಳಿದ ಅಭಿಷೇಕದ ನೀರನ್ನು ರುದ್ರರು ಗರುಡ ಶೇಷಾದಿ ವಾಯುದೇವರು ಸಹಿತ ಪ್ರತಿಮೆಗಳಿದ್ದರೆ ತಾರತಮ್ಯದ ಪ್ರಕಾರ ಆಯಾ ದೇವತೆಗಳ ಮಂತ್ರಗಳಿಂದ ಅಭಿಷೇಕ ಮಾಡಿ ವಸ್ತ್ರದಿಂದ ಒರೆಸಿ ದೇವರ ಎಡ ತಟ್ಟೆಯಲ್ಲಿ ಶಂಖವನ್ನೂ ಬಲ ತಟ್ಟೆಯಲ್ಲಿ ಗರುಡ ಶೇಷಾದಿ ರುದ್ರವಾಯು ದೇವರನ್ನು ಇಡಬೇಕು.

ಇಲ್ಲಿ ಕೆಲವು ಸಂಪ್ರದಾಯ ಅಂದರೆ ನಿರ್ಮಾಲ್ಯ ವಿಸರ್ಜನೆ ನೀರನ್ನು ಅರ್ಘ್ಯ ಬಟ್ಟಿಗೆ ಹಾಕುವರು. ಕೆಲವರು ಶಂಖಕ್ಕೆ ಅಭಿಷೇಕ ಮಾಡಿ ಉಳಿದ ನೀರಿನಿಂದ ಇನ್ನುಳಿದ ದೇವರಿಗೆ ಅಭಿಷೇಕ ಮಾಡುವರು. ಕೆಲವರು ನಿರ್ಮಾಲ್ಯದ ತಂಬಿಗೆಯೊಳಗಿನ ನೀರಿನಿಂದಲೂ ಅಭಿಷೇಕ ಮಾಡುವರು. ಮೂರರಲ್ಲಿ ಯಾವುದೊಂದು ಕ್ರಮವನ್ನು ಅನುಸರಿಸಿದರೂ ತಪ್ಪಾಗದು.

ಮಂಟಪ ಧ್ಯಾನ

ಉತ್ತಪ್ತೋಜ್ವಲ ಕಾಂಚನೇನ ರಚಿತಂ ತುಂಗಾಂಗರಂಗಸ್ಥಲಂ ಶುದ್ಧಸ್ಫಟಿಕ ಭಿತ್ತಿಕಾವಿಲಸಿತೈಸ್ತಂಭೈಶ್ಚ ಹೇಮೈಃ ಶುಭೈಃ ದ್ವಾರೈಶ್ಚಾಮರ ರತ್ನರಾಜಖಚಿತೈಃ ಶೋಭಾವಹಂ ಮಂಡಿತೈ ತತ್ರಾನ್ಯೈರಪಿ ಶಂಖಪದ್ಮಧವಲೈಃ ಪ್ರಭ್ರಾಜಿತಂ ಸ್ವಸ್ತಿಕೈಃ। ಮುಕ್ತಾಜ್ವಾಲ ವಿಲಂಬಿ ಮಂಟಪಯುತಂ ವಜ್ರೈಶ್ಚ ಸೋಪಾನಕೈಃ। ನಾನಾರತ್ನವಿನಿರ್ಮಿತೈಶ್ಚ ಕಲಶೈ ರತ್ಯಂತ ಶೋಭಾವಹಮ್ ॥

ಮಾಣಿಕ್ಯೋಜ್ವಲ ದೀಪ ದೀಪ್ತ ವಿಲಸಲ್ಲಕ್ಷ್ಮೀ ವಿಲಾಸಾಸ್ಪದಮ್। ಧ್ಯಾಯೇನ್ಮಂಟಪ

ಮಾರ್ಜರನೇಷು ಸಕಲೈರೇವಂ ವಿಧೈಃ ಸಾಧಕೈಃ। ಸಂವಾರ್ಜನೈರಂಗವಲ್ಲೀ ಧ್ವಜಕೇತಕತೋರಣೈ ವಿತಾನೈರಿಕ್ಷುಕದಲೀ ಪೂರ್ಣ ಕುಂಭಾಕುರಾದಿಭಿಃ ॥ ಗೀತಾವಾದಿತ್ರನೃತ್ಯೈಶ್ಚ ಪುರಾಣ ಪಠಣೈ ಶುಭೈಃ ಶೋಭಾಮಾನಂ ಮಹಾಪುಣ್ಯಂ ವರ್ಧಮಾನಂ ಮನೋಹರಮ್ ॥

ಶ್ರೀಹರಿಯು ಕೂಡುವ ಮಂಟಪವನ್ನು ಎಷ್ಟು ವರ್ಣಿಸಿದರೂ ಸಾಲದು. ಅಂತಹ ಪರಮಾತ್ಮನ ಮಂಟಪವನ್ನು ಕಣ್ಣು ತುಂಬ ನೋಡಿ ಆನಂದಪಟ್ಟು ಪೂಜೆಯನ್ನು ಆರಂಭಿಸಬೇಕು.

ಭೂತೋಚ್ಚಾಟನೆ – ಆಸನ ಶುದ್ಧಿ ದಿಗ್ಬಂಧನ

ಅಪಕ್ರಾಮಂತು ಯೇ ಭೂತಾಃ ಕ್ರೂರಾಶ್ಚೈವತು ರಾಕ್ಷಸಾ। ಯೇ ಚಾತ್ರ ನಿವಸಂತ್ಯೇವ ದೈವತಾ ಭುವಿ ಸಂತತಂ। ತೇಷಾಮಪ್ಯ ವಿರೋಧೇನ ಬ್ರಹ್ಮಕರ್ಮ ಸಮಾರಭೆ ॥

ಈ ಮಂತ್ರ ಹೇಳುತ್ತ ಎಂಟೂ ದಿಕ್ಕಿಗೂ ತಲೆಯ ಮೇಲೆ ಚಿಟಿಕೆ ಹೊಡೆದು ಭೂತ–ಪ್ರೇತ–ಪಿಶಾಚಾ–ರಾಕ್ಷಸರನ್ನು ಓಡಿಸಬೇಕು.

ಆಸನ :– ಆಸನೇ ಸೋಮ ಮಂಡಲೇ ಕೂರ್ಮಸ್ಕಂದೇ ಉಪವಿಷ್ಟೋ*ಸ್ಮಿ

ಪೂಜೆಗೆ ಕೂಡ್ರುವದಾದರೂ ಪದ್ಧತಿ ಇದೆ. ವೀರಾಸನ, ಪದ್ಮಾಸನ, ಸ್ವಸ್ತಿಕಾಸನ. ಇದರಲ್ಲಿ ಯಾವುದಾದರೊಂದು ಆಸನದಲ್ಲಿ ಕೂಡ್ರಬೇಕು.

ಭೂಮಿ ಪ್ರಾರ್ಥನೆ :– ಪೃಥ್ವಿತಯಾ ದೃತಾ ಲೋಕಾದೇವಿತ್ವಂ ವಿಷ್ಣುನಾ ದೃತಾ ತ್ವಂ ಚ ಧಾರಯ ಮಾಂ ದೇವಿ ಪವಿತ್ರ ಕುರುಚಾಸನಮ್ ಮಾಂ ಚ ಪೂತಂ ಕುರುಧರೇ ನತೋಽಸ್ಮಿತ್ವಾಸುರೇಶ್ವರಿ ॥

ಕುಳಿತ ಸ್ಥಳವನ್ನೇ ಮುಟ್ಟಿ ನಮಸ್ಕರಿಸಬೇಕು.

ದಿಗ್ಬಂಧನ :– ಓಂ ಭೂರ್ಭುವ ಸ್ವರೋಮ್ । ಓಂ ಮಂ ಮಂಡೂಕಾಯ ನಮಃ ॥ ಓಂ ಕೂಂ ಕೂರ್ಮಾಯ ನಮಃ ॥ ಓಂ ವಂ ವರಾಹಾಯ ನಮಃ ॥ ಓಂ ಶೇಂ ಶೇಷಾಯ ನಮಃ ॥ ಓಂ ಕಾಂ ಕಾಲಾಗ್ನಿ ರುದ್ರಾಯ ನಮಃ ॥ ಓಂ ವಂ ವಜ್ರಾಯ ನಮಃ ॥

ಹೀಗೆ ಹೇಳುತ್ತ ಎಂಟೂ ದಿಕ್ಕಿಗೂ– ಐಂದ್ರ್ಯಾದಿ ದಿಕ್ಷು ಬದ್ನಾಮಿ ಓಂ ನಮಃ ಚಕ್ರಾಯ ಸ್ವಾಹಾ । ಚಕ್ರಮುದ್ರೆಯನ್ನು ತೋರಿಸಬೇಕು.

ಶುದ್ಧತೆ ಶಾಂತತೇ ಸುಗಂಧತೆ ಸುಪ್ರಸನ್ನತೆ ಸುವಿಚಾರ ಈ ಐದನ್ನು ಪೂಜೆ ಪ್ರಾರಂಭಿಸುವ ಪೂರ್ವ ಏಕೀಕೃತ ಮಾಡಿಕೊಳ್ಳಬೇಕು.

ಸಂಕಲ್ಪ :- ಆಚಮ್ಯ ಕೇಶವ ನಾರಾಯಣ ಮಾಧವ ಗೋವಿಂದ .... ೨೪ ನಾಮಸ್ಮರಣೆಗಳು ಶುಭೇ ಶೋಭನೇ ಮುಹೂರ್ತೇ ವಿಷ್ಣೋಃ ಆಜ್ಞಯಾ ಪ್ರವರ್ತಮಾನಸ್ಯ ಆದ್ಯಬ್ರಹ್ಮಣಾಃ ದ್ವಿತೀಯ ಪರಾರ್ಧೇ ಶ್ರೀ ಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿ ತಮೇ ಕಲಿಯುಗೇ ಪ್ರಥಮ ಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ದಂಡಕಾರಣ್ಯೇ ದೇಶೇಗೋದಾವರಿ ದಕ್ಷಿಣೇ ತೀರೆ ಶಾಲಿವಾಹನ ಶಕೆ ಬೌದ್ಧಾವತಾರೆ ರಾಮ ಕ್ಷೇತ್ರೇ ಅಸ್ಮಿನ್ ವರ್ತಮಾನೇನ .... ಸಂವತ್ಸರೇ .... ಅಯನೇ .... ಋತೌ .... ಮಾಸೇ .... ಪಕ್ಷೇ .... ತಿಥೌ .... ನಕ್ಷತ್ರೇ .... ಯೋಗ .... ಕರಣೇ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭ ತಿಥೌ (ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ) ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ ಪ್ರೀತ್ಯರ್ಥಂ ಭಗವತೋ ಭಲೇನ ವೀರ್ಯೇಣ ಭಗವತಸ್ತೇಜಸಾ ಕರ್ಮಣಾ ಸಂಜೀವಿತ

ಸ್ವಾಂತ ವಪುಶ್ಚಂದಿಂದ್ರಯೋಹಂ ಸಾಲಿಗ್ರಾಮ ಅನಂತ ಅವತಾರ ರೂಪ ಗುಣ ಫಲ ಕ್ರಿಯಾತ್ಮಕ ಸಾಲಿಗ್ರಾಮಸ್ಯ ಯಥಾ ಮತಿ ಯಥಾಶಕ್ತಿ ಪೂರ್ವಕಂ ದಿನನಿತ್ಯಂ ಷೋಡಶೋಪಚಾರ ಪೂಜಾಂ ಕರಿಷ್ಯೇ ॥

ಅನಂತ ಕಲ್ಯಾಣ ಗುಣೈಕ ಸಿಂಧು ಶ್ರೀ ವಿಷ್ಣುನಾ ಪ್ರೇರಿತ ಮಾನಸೋಹಮ್ ।
ತಸ್ಯೈವ ವೀರ್ಯೇಣ ಬಲೇನ ತೇಜಸಾ ಸಂಜೀವಿತ ಸ್ವಾಂತವಪುಶ್ಚಿಂದಿಂದ್ರಯೋ*ಹಮ್ ॥
ದೇವಪೂಜಾಂ ಕರಿಷ್ಯಾಮಿ ಯಥಾ ವಿಭವಮಚ್ಯುತ ॥

ಕರಶುದ್ಧಿ :– ಓಂ ಯಂ ಕೈಯ ಮಣಿಕಟ್ಟು
ಓಂ ರಂ ಮೊಣಕೈ ಕೆಳಭಾಗ
ಓಂ ವಂ ಎರಡೂ ಮೊಣಕೈ
ಓಂ ಯಂ ಬೆರಳುಸಂದು
ಓಂ ರಂ ಎರಡೂ ಮುಂಗೈ
ಓಂ ವಂ ಎರಡೂ ಕೈಗಳ ನಡುಬದಿ

ಗುರು ನಮಸ್ಕಾರ :- ಶ್ರೀ ಗುರುಭ್ಯೋ ನಮಃ ॥ ಪರಮ ಗುರುಭ್ಯೋ ನಮಃ ॥ ಶ್ರೀ ನಾರಾಯಣಾಯ ನಮಃ ॥ ಲಕ್ಷ್ಮೀನಾರಾಯಣಾಯ ನಮಃ ॥ ಶ್ರೀ ವಾಸುದೇವಾಯ ನಮಃ ॥

ಹೊಕ್ಕಳು, ಹೃದಯ,ತಲೆ, ಶಿರಸ್ಸು, ಕಣ್ಣು, ಮೂಗು, ಶಿಲೆ, ಸ್ವಸ್ತಿಕಾಕಾರವಾಗಿ ಕೈಗಳಿಂದ ಎಡ-ಬಲಭುಜ ಮುಟ್ಟಿ ಚಪ್ಪಾಳೆ ಹೊಡೆಯಬೇಕು.

ಕಲಶಪೂಜಾ :- ದೇವರ ಬಲಭಾಗದಲ್ಲಿ ಎರಡು ನೀರು ತುಂಬಿದ ಕಲಶ ತಂಬಿಗೆ ಇಡಬೇಕು. (ಒಂದು ಶುದ್ಧ ಕುಂಭ ಇನ್ನೊಂದು ಪೂರ್ಣ ಕುಂಭ) ಎರಡೂ ಕಲಶಕ್ಕೂ ಗಂಧ ಹಚ್ಚಬೇಕು. ತುಳಸೀದಳ, ಹೂವು, ಅಕ್ಷತೆ ಹಚ್ಚಬೇಕು. ಕಲಶದ ಮೇಲೆ ಬಲಗೈ ಇಟ್ಟು- ಗಂಗೇ ಚ ಯಮುನೇಚೈವ ಗೋದಾವರಿ ಗಂಡಕೀ । ನರ್ಮದಾ ಸಿಂಧು ಕಾವೇರಿ ಜಲೇ*ಸ್ಮಿನ್ ಸನ್ನಿಧಿಂ ಕುರು ॥

ಮುದ್ರೆಗಳು :- ತಾರ್ಕ್ಷ್ಯ ಮುದ್ರಾಂ ಪ್ರದರ್ಶಯಾಮಿ

ದೇನು ಮುದ್ರಾಂ ಪ್ರದರ್ಶಯಾಮಿ

ಶಂಖ ಮುದ್ರಾಂ ಪ್ರದರ್ಶಯಾಮಿ

ಚಕ್ರ ಮುದ್ರಾಂ ಪ್ರದರ್ಶಯಾಮಿ

ಗದಾ ಮುದ್ರಾಂ ಪ್ರದರ್ಶಯಾಮಿ

ಪದ್ಮ ಮುದ್ರಾಂ ಪ್ರದರ್ಶಯಾಮಿ

ಈ ರೀತಿ ಕಲಶಕ್ಕೆ ಷಷ್ಠ ಮುದ್ರೆ ತೋರಿಸಬೇಕು.

ಎರಡೂ ಕಲಶದ ಮೇಲೆ ಬಲಗೈ ಇಟ್ಟು– ಓಂ ನಮೋ ನಾರಾಯಣಾಯ ಓಂ (ಎಂಟು ಸಾರೆ ಅನ್ನಬೇಕು)

ಕಲಶಕ್ಕೆ ಪ್ರಾರ್ಥನೆ :– ಕಲಶಃ ಕೀರ್ತಿಮಾಯುಷ್ಯಂ ಪ್ರಜ್ಞಾಮೇಧಾಂ ಶ್ರಿಯಂಬಲಮ್ ಯೋಗ್ಯತಾಂ ಪಾಪಹಾನಿಂ ಚ ಪುಣ್ಯವೃದ್ಧಿ ಚ ಸಾಧಯೇತ್। ಸರ್ವತೀರ್ಥಮಯೋ ಯಸ್ಮಾತ್ ಸರ್ವಕ್ಷೇತ್ರಮಯೋ ಯತಃ ಅತೋಹರಿ ಪ್ರಿಯೋಽಸ್ಮಿ ತ್ವ ಪೂರ್ಣಕುಂಭ ನಮೋಸ್ತುತೇ ॥

ಶಂಖಪೂಜಾ :– ಶಂಖಂ ಚಂದ್ರಾರ್ಕ ದೈವತ್ಯಂ ಮಧ್ಯೆವರುಣದೈವತಂ ಷಷ್ಠೆ ಪ್ರಜಾಪತಿಸ್ತತ್ರ

ಅಗ್ರೇ ಗಂಗಾಸರಸ್ವತಿ ॥ ಗಂಧ ಪುಷ್ಪ ಸಮರ್ಪಯಾಮಿ ॥

ಘಂಟಾ ಪೂಜೆ :– ಘಂಟೆಗೆ ಹೂವಿನಿಂದ ಸ್ನಾನ ಮಾಡಿಸಿ ಪೂಜಿಸಬೇಕು. (ಘಂಟೆ ಬಾರಿಸಬೇಕು)

ದೀಪ ಪೂಜೆ ದೀಪಕ್ಕೂ ಪೂಜಿಸಬೇಕು. ಧೂಪ–ದೀಪಗಳ ಹಲಗಾರತಿಗಳಿಗೂ ಪೂಜಿಸಬೇಕು.

ಪೀಠ ಪೂಜಾ :– ವಿಷ್ಣುರಾಸನ ಭೂತಾಯ ದಿವ್ಯರತ್ನಮಯಾ ಯಚ ಪ್ರಧಾನ ಪುರುಷೇಶಾಯ ಮಹಾಪೀಠಾಯ ತೇ ನಮಃ ॥

ದೇವರ ಪೀಠವನ್ನು ಮುಟ್ಟಿ ಹೂವುಗಳನ್ನು ಏರಿಸಬೇಕು. ಸಾಲಿಗ್ರಾಮಾದಿಗಳನ್ನು ಬೆಳ್ಳಿಯ ತಟ್ಟೆ ಇಲ್ಲವೆ ತಾಮ್ರದ ತಟ್ಟೆಯಲ್ಲಿಡಬೇಕು. ದೇವರ ಪ್ರತಿಮೆಗಳಿದ್ದರೆ ಇನ್ನೊಂದು ತಟ್ಟೆಯಲ್ಲಿ ಇಡಬೇಕು. (ಪಂಚಾಮೃತವನ್ನು ಮಾಡಲು ಅನುಕೂಲವಿದ್ದಲ್ಲಿ ಆ ಮಂತ್ರಗಳು ಬೇರೆ ಪುಸ್ತಕದಲ್ಲಿ ಬರೆಯಲಾಗಿದೆ)

ಸಾಲಿಗ್ರಾಮ ಶಿಲಾಯಾಂ ವೈ ಸ್ವಯಂ ವ್ಯಕ್ತಸ್ತಥೈವಚ ॥ ಸಾಲಿಗ್ರಾಮದ ಮೇಲೆ ತುಳಸೀದಳವನ್ನಿಡಬೇಕು.

ಸೂಚನೆ :- ಸಾಲಿಗ್ರಾಮಕ್ಕೆ ಅಭಿಷೇಕಗಳು- ೧) ಟೆಂಗಿನ ಎಳೆನೀರಿನ ಅಭಿಷೇಕ ೨) ಗಂಧಾಭಿಷೇಕ ೩) ಮಧು ಅಭಿಷೇಕ ೪) ಕ್ಷೀರಾಭಿಷೇಕ ೫) ಪುಷ್ಪ ತೈಲಾಭಿಷೇಕ (ಸುವಾಸನೆ, ಪರಿಮಳ ತೈಲ) ೬) ಜಾಜಿ-ಲವಂಗ ಪಚಕರ್ಪೂರ ಹರಿದ್ರಾ ಇತ್ಯಾದಿ ಅಭಿಷೇಕಗಳನ್ನು ವಿಶೇಷ ಸಂದರ್ಭದಲ್ಲಿ ಆಯಾ ಸಾಲಿಗ್ರಾಮಗಳ ಶ್ಲೋಕದೊಂದಿಗೆ ಹನ್ನೊಂದು, ನೂರಾಎಂಟು, ಸಹಸ್ರ ಶಂಖಾಭಿಷೇಕ ಮಾಡಬಹುದು.

ನಿತ್ಯ ಅಭಿಷೇಕ :- ಪೂರ್ಣಕುಂಭದಲ್ಲಿಯ ನೀರನ್ನು ಶಂಖದಲ್ಲಿ ಹಾಕಿಕೊಂಡು ಗಂಟೆ ಬಾರಿಸುತ್ತ ಗಂಧೋದಕ ಸಹಿತವಾಗಿ-

ಪುರುಷಸೂಕ್ತವಾದ ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ಸ
ಭೂಮಿಂ ವಿಶ್ವತೋ ವೃತ್ತಾऽತ್ಯ ತಿಷ್ಠದ್ದಶಾಂಗುಲಮ್ ॥
ಸಂಸೃಷ್ಟಂ ಧನ ಮುಭಯಂ ಸಮಾಕೃತ ಮಸ್ಮಭ್ಯಂ ದತ್ತಾವರುಣಶ್ಚಮನ್ಯುಃ ॥
ಭಿಯಂ ದಧಾನಾ ಹೃದಯೇಷು ಶತ್ರವಃ ಪರಾಜಿತಾಸೋ ಅಪಾನಿಲಯಂತಾಮ್ ॥
(ಪೂರ್ಣ ಪುರುಷಸೂಕ್ತದೊಂದಿಗೆ ಅಭಿಷೇಕ ಮಾಡಬೇಕು)

॥ ಶುದ್ಧೋದಕ ಸ್ನಾನಂ ಸಮರ್ಪಯಾಮಿ ॥

ನಂತರ ಶುದ್ಧವಾದ ಸ್ವಚ್ಛವಾದ ವಸ್ತ್ರದಿಂದ ಸಾಲಿಗ್ರಾಮಾದಿಗಳನ್ನು ಒರೆಸಿ ಸಂಪುಷ್ಟದಲ್ಲಿ ಇಡಬೇಕು. ಅಭಿಷೇಕದ ಉದಕವೇ ತೀರ್ಥವು.

ದೇವಸ್ಯತ್ವಾ ಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪ್ರೋಷ್ಣೋಹಸ್ತಾಭ್ಯಾ ಮಗ್ನೆಸ್ತೇಜಿಸಾ ಸೂರ್ಯಸ್ಯ ವರ್ಚಸೇಂದ್ರ ಸ್ಯೈಂದ್ರಿಯೇಣಾಭಿಷಿಂಚಾಮಿ ॥

ಬಲಾಯ ಶ್ರೀಯ್ಯೆ ಯಶಸೇನ್ನಾದ್ಯಾಯ । ಭೂರ್ಭುವಸ್ವಃ ಅಮೃತಾಭಿಷೇಕೋಸ್ತು ॥ ಶಾಂತಿಃ ಪುಷ್ಟಿಶ್ಚಾಸ್ತು ॥ ಓಂ ನಮೋ ಸಾಲಿಗ್ರಾಮ ಅಭಿಷೇಕ ಸ್ನಾನಂ ಸಮರ್ಪಯಾಮಿ ॥ ಆಚಮನೀಯಂ ಸಮರ್ಪಯಾಮಿ ॥ ಸುಪ್ರತಿಷ್ಠಿತಮಸ್ತು ॥

ವಸ್ತ್ರೋಪವಸ್ತ್ರಾರ್ಥೇ ತುಳಸೀ ಪತ್ರಂ ಸಮರ್ಪಯಾಮಿ ॥

ಓಂ ಯಜ್ಞೋಪವೀತಾರ್ಥೆ ತುಳಸೀ ಪತ್ರಂ ಸಮರ್ಪಯಾಮಿ ॥

ಓಂ ಶ್ರೀಖಂಡಂ ಚಂದನಂ ದಿವ್ಯಂ ಗಂಧಾಡ್ಯಂ ಸುಮನೋಹರಂ ॥ ವಿಲೇಪನಂಸುರಶ್ರೇಷ್ಠಂ ಚಂದನಂ ಪ್ರತಿಗೃಹ್ಯತಾಂ ॥ ಗಂಧಂ ಸಮರ್ಪಯಾಮಿ ॥ (ಗಂಧದ

ಗುಳಿಗೆಗಳನ್ನಿಡಬೇಕು)

ಮಾಲ್ಯಾದೀನ ಸುಗಂಧೀನ ಮಾಲತ್ಯಾದೀನಿ ವೈಪ್ರಭೋ। ಮಯಾಹೃತಾನಿ ಪುಷ್ಪಾಣಿ ಪೂಜಾರ್ಥಂ ಪ್ರತಿಗೃಹ್ಯತಾಂ ॥

ದಶಾವತಾರ ಕೇಶವಾದಿನಾಮ ವಿಷ್ಣುಸಹಸ್ರನಾಮ ಮುಂತಾದವುಗಳಿಂದ ಸಾಲಿಗ್ರಾಮಗಳಿಗೆ ಗಂಧ ತುಳಸೀ ಹೂವು ಅರ್ಚಿಸುವದು ಅತಿ ಶ್ರೇಷ್ಠ.

ಧೂಪ :- ವನಸ್ಪತಿ ರಸೋದ್ಭೂತೋ ಗಂಧಾಡ್ಯೋ ಗಂಧ ಉತ್ತಮ ॥ ಮಯಾನಿವೇದಿತೋಭಕ್ತ್ಯಾ ಧೂಪೋಯಂ ಪ್ರತಿಗೃಹ್ಯತಾ ॥

ದೀಪ :- ಸ್ವಾಜ್ಯಂ ತ್ರಿವರ್ತಿಸಂಯುಕ್ತ ವಹ್ನಿನಾ ಯೋಜಿತಂ ಮಯಾ ದೀಪಂ ಗೃಹಾಣ ದೇವೇಶತ್ರೈಲೋಕ್ಯತಿಮಿರಾಪಹ ॥

ನೈವೇದ್ಯ :- ದೇವರ ಮುಂಭಾಗದಲ್ಲಾಗಲೀ, ಬಲಭಾಗದಲ್ಲಾಗಲೀ ಚೌಕಾಕಾರದ ಮಂಡಲ ಮಾಡಿ ಅದರ ಮೇಲೆ ಪರಮಾತ್ಮನಿಗೆ ಮಾಡಿದ ಸುಭಕ್ಷ ಅಡಿಗೆಯನ್ನು ಕ್ರಮಬದ್ಧವಾಗಿ ಇಡಬೇಕು. ಅದಕ್ಕೆ ಅಭಿಘಾರವನ್ನು ಮಾಡಿ ತುಳಸೀದಳ ಹಾಕಿ ॥

ಸತ್ಯಂತವರ್ತೇನ ಪರಿಷಿಂಚಾಮಿ ॥ ಎಂಬುದಾಗಿ ಅನ್ನುತ್ತ ಆ ಪದಾರ್ಥದ ಸುತ್ತಲೂ ಹಾಕಬೇಕು. ॥ ಅಮೃತೋಪಸ್ತರಣಮಸಿ ॥ ಇತಿ ಆಪೋಶನಂ ॥ ಪ್ರಾಣಾಯ ನಮಃ ॥ ಅಪಾನಾಯ ನಮಃ ॥ ವ್ಯಾನಾಯ ನಮಃ ॥ ಉದಾನಾಯ ನಮಃ ॥ ಸಮಾನಾಯ ಸ್ವಾಹಾ ॥ ಪಂಚಪ್ರಾಣಾಹುತಿದತ್ವಾ ॥

ಮನೆಯಲ್ಲಿ ಪೂಜಿಸುವ ಸಾಲಿಗ್ರಾಮ ಮಂತ್ರಶಕ್ಯವಿದ್ದಷ್ಟು ಸಾರೆ ಉಚ್ಚರಿಸಬೇಕು (ಜಪಿಸಬೇಕು) ಮಧ್ಯೇ ಪಾನೀಯಂ ಸಮರ್ಪಯಾಮಿ ॥ ಅಮೃತಾಪಿಧಾನಮಸಿ ॥ ಹಸ್ತಪ್ರಕ್ಷಾಲನಂ ಸಮರ್ಪಯಾಮಿ ॥ ಪೂಂಗಿ ಫಲಂ ಸಮರ್ಪಯಾಮಿ ॥ ತಾಂಬೂಲಂ ಸಮರ್ಪಯಾಮಿ ॥ ಸುವರ್ಣ ಪುಷ್ಪ ದಕ್ಷಿಣಾ ಸಮರ್ಪಯಾಮಿ ॥

ಮಹಾನೀರಾಜನ ದೀಪ :- ಅರ್ಚತ ಪ್ರಾರ್ಚತಪ್ರೀಯ ಮೇಧಾಸೋ ಅರ್ಚತ ಅರ್ಚಂತು ಪುತ್ರಕಾ ಉತಪುರಂನ ಧೃಷ್ಣ್ವರ್ಚತ ॥

ಮಂತ್ರಪುಷ್ಪ ಸಮರ್ಪಯಾಮಿ ॥ ಛತ್ರಂ ॥ ಚಾಮರಂ ॥ ವ್ಯಂಜನಂ ॥ ದರ್ಪಣಂ ॥ ಗೀತಂ ॥ ವಾದ್ಯಂ ॥ ಸ್ತೋತ್ರಂ ಸಮರ್ಪಯಾಮಿ ॥ ಸಮಸ್ತರಾಜೋಪಚಾರಾರ್ಥೇ ಪುಷ್ಪ

ಸಮರ್ಪಯಾಮಿ ॥ ಪ್ರದಕ್ಷಣ ನಮಸ್ಕಾರಂ ಸಮರ್ಪಯಾಮಿ ॥ ಪ್ರಾರ್ಥನಾಂ ಸಮರ್ಪಯಾಮಿ ॥

ಸಾಲಿಗ್ರಾಮ ಶಿಲಾಸ್ಪರ್ಶಂ ಯೇ ಕುರ್ವಂತಿ ದಿನೇ ದಿನೇ ವಾಂಛಂತಿ ಕರಸಂ ಸ್ಪರ್ಶಂ ತೇಷಾಂ ದೇವಾ ಸವಾಸವಾ ॥

ಸಮರ್ಪಣೆ :- ಯಸ್ಯಮಸ್ಮೃತ್ಯಾ ಚನಾಮೋಕ್ತ್ಯಾ ತಪಃ ಪೂಜಾ ಕ್ರಿಯಾದಿಷು ॥ ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋವಂದೇ ತಮಚ್ಯುತಮ್ ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿ ರಮಾಪತೇ ॥ ಯತ್ಕೃತಂ ತು ಮಯಾದೇವ ಪರಿಪೂರ್ಣಂ ತದಸ್ತುಮ್ ॥

ಅನೇನ ಸರ್ವಸಾಲಿಗ್ರಾಮ ಪೂಜಾತ್ಮಕ ಕರ್ಮಣಾ ಸಕಲ ನಾಮ ಸಾಲಿಗ್ರಾಮ ಪ್ರೀಯತಾಂ ಪ್ರೀತೋಭವತು ॥ ಕಾಯೇನ ವಾಚಾ ಮನಸೇಂದ್ರಿಯ್ಯೈರ್ವಾ ಬುದ್ಧ್ಯಾತ್ಮನಾ ವಾಽ ನು ಸೃತಃ ಸ್ವಭಾವಂ ॥ ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯ ಇತಿ ಸಮರ್ಪಯಾಮಿ ॥

ಮಧ್ಯೇ ಮಧ್ಯೇ ಮಂತ್ರ-ತಂತ್ರ-ಸ್ವರ-ವರ್ಣ ಲೋಪದೋಷ ಪ್ರಾಯಶ್ಚಿತ್ತಾರ್ಥಂ

ನಾಮತ್ರಯ ಮಂತ್ರಂ ಜಪಂ ಕರಿಷ್ಯೆ॥ ಅಚ್ಯುತಾಯ ನಮಃ ॥ ಅನಂತಾಯ ನಮಃ ॥ ಗೋವಿಂದಾಯ ನಮಃ ॥ ಅಚ್ಯುತಾನಂತ ಗೋವಿಂದಾಯ ನಮೋ ನಮಃ ॥

॥ ಇತಿ ಸಾಲಿಗ್ರಾಮ ಸಂಕ್ಷಿಪ್ತ ಪೂಜಾ ಸಂಪೂರ್ಣಂ ॥

ಭಗವಂತನ ದರ್ಶನಕ್ಕೆಂದು ನಾವು ದೇವಾಲಯಕ್ಕೆ ಹೋದಾಗ ಒದಗಬಹುದಾದ ಕೆಲವು ಅಪಚಾರಗಳನ್ನು ಹೀಗೆ ಪರಿಗಣಿಸಲಾಗಿದೆ- ೧) ವಾಹನರೂಢರಾಗಿ ಅಥವಾ ಪಾದರಕ್ಷೆಗಳನ್ನು ಹಾಕಿಕೊಂಡು ದೇವ ಮಂದಿರಕ್ಕೆ ಹೋಗಬಾರದು. ೨) ದೇವರ ರಥೋತ್ಸವ ಜನ್ಮೋತ್ಸವ ಮುಂತಾದ ಉತ್ಸವಗಳು ನಡೆಯುತ್ತಿದ್ದರೆ ದರ್ಶಿಸದೇ ನಿರಾಕರಿಸಿ ಹೋಗಬಾರದು. ೩) ಶ್ರೀ ಭಗವಂತನ ಮೂರ್ತಿಯನ್ನು ದರ್ಶನ ಮಾಡಿ ನಮಸ್ಕರಿಸದೇ ಇರಬಾರದು. ೪) ಅಶುಚಿಯಾದಾಗ ದೇವರ ದರ್ಶನ ನಿಷಿದ್ಧವು. ೫) ಒಂದೇ ಕೈಯಿಂದ ನಮಸ್ಕಾರ ಮಾಡಬಾರದು. ೬) ಪ್ರದಕ್ಷಣೆ ಮಾಡುವಾಗ ದೇವರ ಮುಂದೆ ಬಂದಾಗ ಸ್ವಲ್ಪ ನಿಲ್ಲದೆ ಮತ್ತೆ ಪ್ರದಕ್ಷಿಣೆ ಮಾಡುವದು ತಪ್ಪು ಹಾಗೂ ಮುಂದುಗಡೆಗೆ ಪ್ರದಕ್ಷಿಣೆ ಮಾಡಬಾರದು. ೭) ಭಗವಂತನ ವಿಗ್ರಹದ ಮುಂದೆ ಕಾಲು ಚಾಚಿ ಕೂಡ್ರಬಾರದು. ೮) ದೇವರ ಮುಂದೆ

ಎರಡೂ ಮುಂಡಿಗಳನ್ನು ಮೇಲಕ್ಕೆತ್ತಿ ಅವುಗಳನ್ನು ಕೈಗಳಿಂದ ಬಳಿಸಿಕೊಂಡು ಕುಳಿತುಕೊಳ್ಳಬೇಕು. ೯) ದೇವರ ವಿಗ್ರಹಗಳ ಮುಂದೆ (ದೇವರ ಮುಂದೆ) ಮಲಗಬಾರದು. ೧೦) ದೇವಾಲಯದ ಭಗವಂತನ ಮುಂದೆಯೇ ಎಂದೂ ಊಟ ಮಾಡಬಾರದು. ೧೧) ದೇವರ ವಿಗ್ರಹ (ಮೂರ್ತಿ)ದ ಮುಂದೆ ಸುಳ್ಳು ಸುಳ್ಳು ಮಾತನಾಡಬಾರದು. ೧೨) ದೇವರ ಮೂರ್ತಿಯ ಮುಂದೆ ಒದರುವದು ಗಟ್ಟಿ ಮಾತನಾಡುವದು ಪರಸ್ಪರ ಹರಟೆ ಹೊಡೆಯುವದು ಚೀರುವದು ಕೂಗುವದು ನ್ಯಾಯಾಡುವದು ಹೊಡೆದಾಡುವದು ಈ ಕೃತಿಯು ಪರಮಾತ್ಮನನ್ನು ನಿಂದಿಸಿದಂತೆಯೇ ಸರಿ. ೧೩) ದೇವಾಲಯದ ದೇವರ ಮುಂದೆ ಮತ್ತೊಬ್ಬರಿಗೆ ಅನುಗ್ರಹಿಸುವದು ನಮಸ್ಕರಿಸಿಕೊಳ್ಳುವದು ಆಶೀರ್ವಾದ ಮಾಡುವದು ಸ್ತುತಿಸಿಕೊಳ್ಳುವದು ಶುದ್ಧ ತಪ್ಪು. ೧೪) ದೇವಾಲಯದಲ್ಲಿ ಇಡೀ ದೇಹವನ್ನು ಹೊದ್ದುಕೊಂಡು ಕೂಡ್ರುವದು. ಮತ್ತೊಬ್ಬರಿಗೆ ಮನ ನೋಯುವಂತೆ ನಿಷ್ಠುರ ಮಾತನಾಡುವದು. ಅಶ್ಲೀಲವಾದ ಪದಗಳಿಂದ ಮಾತನಾಡುವದು ಅಪಾನುವಾಯು ಬಿಡುವದು ದೇವಸ್ಥಾನದ ಪಾವಿತ್ರತೆ ಕಳೆದಂತೆಯೇ ಸರಿ. ೧೫) ಭಗವಂತನ ವಿಗ್ರಹದ ಹತ್ತಿರ ಇದ್ದಾಗ ದೇವರಿಗೆ ನಮಸ್ಕರಿಸಬೇಕೇ

ಹೊರತು ಬೇರೆ ಯಾರಿಗೂ ನಮಸ್ಕರಿಸಬಾರದು. ಹಾಗೆ ಮಾಡಿದಲ್ಲಿ ಭಗವಂತನಿಗೆ ಅಪಮಾನ ಮಾಡಿದಂತೆ. ೧೬) ದೇವರ ಮುಂದೆ ತನ್ನನ್ನು ತಾನು ಹೊಗಳಿಸಿಕೊಳ್ಳಲೂ ಬಾರದು, ಹೊಗಳಲೂಬಾರದು. ೧೭) ದೇವಾಲಯಕ್ಕೆ ಬರುವದಾದಲ್ಲಿ ಗಡಿಬಿಡಿಯಿಂದ ಬರಬಾರದು. ಅವಸರ ಅವಸರ ಮಾಡಬಾರದು. ೧೮) ದೇವರ ವಿಗ್ರಹದ ಮುಂದೆ ಬೆನ್ನು ಮಾಡಿ ಕುಳಿತುಕೊಳ್ಳಬಾರದು. ೧೯) ಸಾಧ್ಯವಾದಷ್ಟು ಆಯಾ ಋತುಗಳಲ್ಲಿ ಬಿಡುವ ಫಲಗಳನ್ನೇ ದೇವರಿಗೆ ನಿವೇದನೆ ಮಾಡಿರಿ. ೨೦) ಪರಮಾತ್ಮನಿಗೆ ಪ್ರೀತಿಯಾದ ಹಾಡು ಸಂಗೀತ ಸ್ತೋತ್ರ ಮಂತ್ರಗಳು ಕುಶಲೋಪಚಾರದ ಪ್ರಶ್ನೆಗಳು ತನ್ನಿಂದ ಆದ ಉಪಕಾರ ಸ್ಮರಣೆ ಇವನ್ನು ದೇವರಿಗೆ ಅರ್ಪಿಸಬೇಕು. ೨೧) ಹಣ್ಣು, ಹಂಪಲು, ಕಾಯಿ ಮುಂತಾದ ನಿವೇದನ ಮಾಡುವದನ್ನು ಇಬ್ಭಾಗಿಸಿ ಅಥವಾ ಮುರಿದು ನಿವೇದಿಸಬಾರದು. ೨೨) ಕೊನೆಯದಾಗಿ ಶ್ರದ್ಧಾ ಭಕ್ತಿಯಿಂದ ದೇವಾಲಯಕ್ಕೆ ದೇವನೊಬ್ಬನನ್ನೇ ದೃಷ್ಟಿಯಲ್ಲಿಟ್ಟುಕೊಂಡು ನಮಸ್ಕರಿಸಬೇಕು. ಮತ್ತೊಂದು ದೇವರನ್ನಾಗಲೀ ದೇವಾಲಯಗಳನ್ನಾಗಲೀ ನಿಂದಿಸಬಾರದು.

॥ ಸಮಾಪ್ತ ॥